ನಗರದ ಅಭಿವೃದ್ಧಿಗಾಗಿ ಪೌರಸಭೆಯು ತಳ್ಳಮಟ್ಟಿಗೆ ಗಮನ ಕೊಡುತ್ತಿದೆ ಈ ವೈಪಿ ಉತ್ತಮ ವೈದ್ಯ ಸೌಲಭ್ಯ ಮನೆಗಳನ್ನು ಕಟ್ಟಲು ಜೈಲ್ ಬಳಿ ಒಂದು ವಿಸ್ತರಣವನ್ನು ನಿರ್ಮಾಣಿಸಿ ತುಮಕೂರು ಅರವತ್ತು ಆಟ್ಟಿಗಳಾಗಿರುತ್ತವೆ ಎಂಬತೆಯಂದಾಗಿ ನಮ್ಮ ನಗರದ ವ್ಯಾಪಾರವು ಬೆಳೆದು ವರ್ತಕರಿಗೆ ಸ್ಥಳ ಸಂಕೋಚದಿಂದ ಇಷ್ಟಾನ ವ್ಯಾಪಾರವು ಅಭಿವೃದ್ಧಿಯಾಗಲು ಪ್ರತ್ಯೇಕವಾದ ಸ್ಥಳವನ್ನು ನಿರ್ಮಿಸಿ ಒದಗಿಸಿರುವ ಹವ ಕಾರ್ಯಕ್ರಮವನ್ನು ಈ ಸರ್ಕಾರದ ಸಹಾಯದಿಂದ ಕೈಗೊಂಡಿದ್ದೇವೆ ಇವು ಅಲ್ಲದೆ ಇಷ್ಟ ಜನರ ಗೃಹಪರಿತಾಗಿ ಬೇರೆ ಇಪ್ಪತ್ತೇಳು ಪ್ರದೇಶಗಳನ್ನು ಮಾಡಿ ವಿಲೇವಾರಿ ಮಾಡಲು ನಿರ್ಧರಿಸಿದೆ

ನವನಾಗರಿಕ ಸ್ವರೂಪ ಬರಲೇಕಾದರೆ ಅಪಾರ ದ್ರವ್ಯ ಸಹಾಯಬೇಕು ಈ ಬಾಗದಲ್ಲಿ ಮಹಾಸ್ವಾಮಿಯವರ ಸರ್ಕಾರದವರು ಅಗಾಗ ಕೊಡುತ್ತಿರುವ ಕೃಪಾ ಸಹಾಯಕ್ಕಾಗಿ ನಾವು ಬಹಳ ಕೃತಜ್ಞತೆಯುಳ್ಳವರಾಗಿ ಇತ್ತೀಚೆ ಮಹಾಸ್ವಾಮಿಯವರ ಸರ್ಕಾರದವರು ವೃತ್ತಿ ಶಿಕ್ಷಣ ಶಾಲೆಗಳನ್ನು ಅಲ್ಲಲ್ಲಿ ಸ್ಥಾಪಿಸುವುದಾಗಿ ತೀರ್ಮಾನಿಸಿರುವುದಕ್ಕೆ ಇಂಥ ಒಂದು ಶಾಲೆಯನ್ನು ತುಮಕೂರಿನಲ್ಲಿ ಸ್ಥಾಪಿಸಬೇಕೆಂದು ಪ್ರಾರ್ಥಿಸುತ್ತೇವೆ

ಮಹಾಪ್ರಭುಗಳ ದಿವ್ಯದೃಷ್ಟಿಯಲ್ಲಿ ಈ ನಗರವನ್ನು ಬೆಂಗಳೂರು, ಮೈಸೂರು ನಗರಗಳಂತೆ ಸುಂದರವಾಗಿ ಮಾಡಿ ಪ್ರಜೆಗಳು ಆನಂದಪಡಲು ಮಹಾಸ್ವಾಮಿಯವರ ಸರ್ಕಾರದವರು ವರ್ಷಂಪ್ರತಿ ಏನಷ್ಟು ಸಹಸ್ರ ರೂಪಾಯಿಗಳ ಉದಾರ ಸಹಾಯವನ್ನು ಹಲವು ವರ್ಷಗಳು ದಯಪಾಲಿಸಬೇಕಾಗಿ ಪ್ರಾರ್ಥಿಸುತ್ತೇವೆ

ತುಮಕೂರು ನಗರಕ್ಕೆ ಇಂಟರ್‌ಮೀಡಿಯೇಟ್ ಕಾಲೇಜು ಮತ್ತು ಜನರಲ್ ಆಸ್ಪತ್ರೆಯ ಆಟ್ಟಡ ಒಂದನ್ನು ಮಹಾಸ್ವಾಮಿಯವರ ಸರ್ಕಾರದವರು ದಯಪಾಲಿಸಬೇಕೆಂದು ತಿಳಿಯುತ್ತೇವೆ ಅವು ಜಾಗ್ರತೆ ಬರುವುದೇ ಎಂದು ನಿರೀಕ್ಷಿಸುತ್ತಿದ್ದೇವೆ

ಮಹಾಸ್ವಾಮಿಯವರಿಗೂ, ಶ್ರೀಮದ್ಯುವರಾಜರವರಿಗೂ, ಇತರ ರಾಜಪರಿವಾರದವರಿಗೂ ಜಗದೀಶ್ವರನು ದೀರ್ಘಾಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನು ಸಲಲ ಸೌಭಾಗ್ಯಗಳನ್ನು ಅನುಗ್ರಹಿಸಲೆಂದೂ, ನಭೋಮಂಡಲದಲ್ಲಿ ಶಾಶ್ವತವಾಗಿ ತೊಳಗಿ ಬೆಳಗುತ್ತಲಿರುವ ಸೂರ್ಯ ಚಂದ್ರ ನಕ್ಷತ್ರಗಳಂತೆ ಮಹಾಸ್ವಾಮಿಯವರ ಧವಳ ಕೀರ್ತಿಯು ಸರ್ವಾವಚಿತವಾಗಿ ಬೆಳಗಿಸಲೆಂದು ಪ್ರಾರ್ಥಿಸುತ್ತೇವೆ

### ಜಿಲ್ಲಾ ಜೋಡಿನ ಬಿನ್ನವತ್ತಳೆ

ಅನಂತರ ಜಿಲ್ಲಾ ಜೋಡಿನ ಪರವಾಗಿ ಅಧ್ಯಕ್ಷರು ಈ ರೀತಿ ಬಿನ್ನವತ್ತಳೆಯನ್ನು ಅರ್ಪಿಸಿದರು.

"ತುಮಕೂರು ಜಿಲ್ಲಾ ಜೋಡಿನ ಅಧ್ಯಕ್ಷ ಮತ್ತು ಸದಸ್ಯರಾದ ನಾವುಗಳು, ಈ ಜಿಲ್ಲೆಯ ಗ್ರಾಮೋತ್ತರ ಪ್ರಜಾ ಸಮುದಾಯದ ಪರವಾಗಿ ಮಹಾಸ್ವಾಮಿಯವರಿಗೆ ಗೌರವವದ ರಾಜಭಕ್ತಿ ವಿಶ್ವಾಸಗಳಂದ ಸ್ವಾಗತವನ್ನು ಬಯಸುವ ಈ ಸುಯೋಗವು ಲಭ್ಯವಾದುದರಿಂದ ಅತ್ಯಂತ ಹರ್ಷಿತರಾಗಿರುವೆವು ಪೂಜ್ಯ ಪ್ರಭುವರ್ಯರಲ್ಲಿ ಕುರಿತ ರಾಜಭಕ್ತಿಯು ಒಂದು ಹೆಮ್ಮೆಯೆಂದು ತಿಳಿದಿರುವ ಸಮಸ್ತ ಪ್ರಜಾವರ್ಗವೂ ಮಹಾಸ್ವಾಮಿಯವರು ಆಗಮಿಸುವ ಈ ಶುಭ ಸಂದರ್ಭವನ್ನೂ ಈ ಜಿಲ್ಲೆಗೆ ಕೃಪೆ ಮಾಡಿರುವುದರಿಂದ ಅತ್ಯಂತ ಸಂತೃಪ್ತವಾಗಿರುವುದು, ಆರೋಗ್ಯ ಶಾಖೆಯ ಡೈರೆಕ್ಟರರು ಸ್ಯಾಟಿಸಿಯರ ಆರೋಗ್ಯ ಸ್ಥಿತಿಗತಿ ಸೂಚಕ ಅಂಕಿಗಳ ಪ್ರಕಾರವೆಯಂದೆ ಸಂಸ್ಥಾದಿಲ್ಲೆಲ್ಲ ಈ ಜಿಲ್ಲೆ ಅತ್ಯಂತ ಆರೋಗ್ಯಕರವಾದ ಜಿಲ್ಲೆ ಎಂದು ಮಪ್ಪವರಿಕೆಯಗುತ್ತದೆ ಈ ಕಾರಣದಿಂದ ಮಹಾಸ್ವಾಮಿಯವ

[೬ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೩೯ ನೆಯ ಜುಲೈ ತಾ|| ೩೧ ನೆಯ ಸೋಮವಾರ

## ಗೋರಕ್ಷಣ.

ಭಾರತೀಯರಿಗೆ ಗೋವು ಮಹಾಪೂಜ್ಯವಸ್ತುವಾಗಿರುವುದು. ಕೋಟ್ಯನುಕೋಟಿ ಪ್ರಾಣಿಗಳಲ್ಲಿ ಗೋವಿಗೆ ಸಮಾನವಾದ ಪ್ರಾಣಿಯು ಈ ಸೃಷ್ಟಿಪ್ರಪಂಚದಲ್ಲಿ ಮತ್ತಾವುದೂ ಇರುವುದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಆದುದರಿಂದ ಸನಾತನ ಭಾರತೀಯರು ಈ ಪ್ರಾಣಿಯನ್ನು ಮಾನವನಿಗೆ ಸಮಾನವಾಗಿ ಭಾವಿಸಿ ಗೋಮಾತೆಯೆಂದು ಕರೆಯುತ್ತ ಇಷ್ಟನ್ನು ಪೂಜಿಸುತ್ತಿರುವರು. ಇದರಿಂದ ಉತ್ಕೃಷ್ಟವಾಗಿರುವ ಪ್ರೇಮ-ಪವಿತ್ರಭೌತಿಕವಲಾದವುಗಳು ಪರಮಾತ್ಮನಿಗೆ ಸ್ವಮವಾಗಿ ಅಭಿಷೇಕಾದಿಗಳಿಗೆ ಯೋಗ್ಯವೆನಿಸಿವವು. ಗೋಮೂತ್ರ-ಗೋಮಯಾದಿಗಳಲ್ಲಿ ಯಾವ ವಸ್ತುವೂ ಕೆಡ್ಡವಾಗುವಂತಿಲ್ಲ. ನೋಸ್ಪಿಸಾಫಿಸೀಯಾದ ಭಸ್ಮವು ಗೋಮಯದಿಂದಲೇ ಸಿದ್ಧವಾಗುವದು. ಅಂತೆಯೇ ಗೋಮಾತೆಯ ಮಹತ್ವವನ್ನು ಎಷ್ಟುಬಾರಿ ಹೇಳಿದರೂ ಕಡಿಮೆಯೆಂಬುದನ್ನು ಕಂಡಲೇ ಯೋಚಿಸಬೇಕಾಗಿದೆ.

ಒಕ್ಕಲತನವೇ ಮುಖ್ಯ ಕ್ರಿಯೆಯಾಗುಳ್ಳ ಭಾರತ ಭೂಮಿಯು ಗೋಮಾತೆಯಿಂದಲೇ ಉದ್ಭವವಾಗಬೇಕಾಗಿದೆ. ಹಿಂದೂ ಜನಾಂಗದ ರಕ್ಷಣೆಪೋಷಣ, ಮೇಧಾಭಿವೃದ್ಧಿ, ಮೊದಲಾದವುಗಳಿಗೆಲ್ಲ ಗೋಸಂತತಿಯೇ ಮೂಲಕಾರಣವಾಗಿದೆ. ಆದುದರಿಂದ ಸನಾತನ ಪೂರ್ವಜರು ಪೂರ್ವಕಾಲದಲ್ಲಿ ಗೋವುಗಳನ್ನು ವಿಶೇಷವಾಗಿ ಸಾಕುತ್ತ ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ನೋಡಿಕೊಂಡು ಹೋಗುತ್ತಿದ್ದರು. ಆ ಕಾಲದಲ್ಲಿ ಗೋಮಾತೆಯ ಪ್ರಭಾವದಿಂದ ಭಾರತೀಯರು ಬುದ್ಧಿವಂತರೂ, ಶ್ರೀಮಂತರೂ, ಶಕ್ತಿವಂತರೂ ಆಗಿ ಮೆರೆಯುತ್ತಿದ್ದರು. ಈಗಿನ ಭಾರತೀಯರು ಪಾಶ್ಚಾತ್ಯರ ಸಂಸರ್ಗದಿಂದ ಗೋಮಾತೆಯಲ್ಲಿ ಪೂಜ್ಯಬುದ್ಧಿಯಿಲ್ಲದೆ ಮತಿಸ ಹಕ್ತಿದುದರಿಂದ ಐಶ್ವರ್ಯಹೀನರಾಗಿ ದಾರಿದ್ರ್ಯದಿಂದ ಕೊರಗುತ್ತಿರುವರು.

ಯಸ್ಯೈಕಾಪಿ ಗೃಹೇ ನಾಸ್ತಿ ಧೇನುವತ್ಸಾನ್ವಿತಾಸುಶೀಲೇವ ।
ಮಂಗಲಾಷ್ಟಕ ಕುತಸ್ತಸ್ಯ ಕುತಸ್ತಸ್ಯ ತಮಃಕ್ಷಯಃ ॥

ಯಾವನ ಮನೆಯಲ್ಲಿ ಕರುವಿನಿಂದ ಯುಕ್ತವಾದ ಒಂದಾದರೂ ಗೋವು ಇರುವುದಿಲ್ಲವೋ, ಅವನಿಗೆ ಮಂಗಲವೆಲ್ಲಿಯದು? ಮತ್ತು ಅಜ್ಞಾನಿನಾಶವೆಲ್ಲಿಯದು? ಎಂದು ಅತ್ರಿಮಹರ್ಷಿಯು ಸಾರಿದ್ದಾನೆ. ಇದರಿಂದ ಮಂಗಲಾಪೇಕ್ಷೆಯೂ ಜ್ಞಾನಾಪೇಕ್ಷೆಯೂ ಆದ ಮನುಷ್ಯನು ತಪ್ಪದೆ ಮನೆಯಲ್ಲಿ ಅವಶ್ಯವಾಗಿ ಗೋವುಗಳನ್ನು ರಕ್ಷಿಸಬೇಕೆಂದು ಸಿದ್ಧವಾಗುವದು.

ಗಾವೋ ಭಗೋ ಗಾವ ಇಂದ್ರೋ ಮೇ ಅಚ್ಛಾನ್ ಗಾವಃ ಸೋಮಸ್ಯ ಪ್ರಥಮಸ್ಯ ಭಕ್ಷಃ । ಇಮಾ ಯಾ ಗಾವಃ ಸಜಷಾ ಇಂದ್ರ ತಾಭ್ಯಾಮಿದ್ಧಿ ವಾ ಮನಸಾ ಶಿವಾಭ್ಯಂ ॥

ಗೋವುಗಳೇ ನನ್ನ ವಯ್ಯರ್ಯವಾಗಿವೆ, ಇಂದ್ರನು ನನಗೆ ಗೋವುಗಳನ್ನೇ ಅನುಗ್ರಹಿಸಲಿ, ಆ ಗೋವುಗಳು ಸೋಮರಸಿಗೆ ಪ್ರೀತಾದಿಗಳನ್ನು ಕೊಡತಕ್ಕವುಗಳಾದುದರಿಂದ ಭಕ್ಷಣಸಾಧನಗಳಾಗಿರಲಿ. ಎಳ್ಳಿ ಜನರೇ! ಈ ವಿಧವಾದ ಗೋವುಗಳು ಹಾಲು-ತುಪ್ಪ ಮೊದಲಾದವುಗಳಿಂದ ರಕ್ಷಿಸುವ ಕಾರಣ ಅವು ಇಂದ್ರಸ್ವರೂಪವಾಗಿವೆ. ಗೋವುಗಳು ಹಾಲು-ತುಪ್ಪ ಮೊದಲಾದವುಗಳನ್ನು ಕೊಡದಿದ್ದರೆ ಯಜ್ಞಾದಿಗಳು ನೆರವೇರಲಾರವು. ಯಜ್ಞಾದಿಗಳು ನೆರವೇರದಿದ್ದರೆ ಇಂದ್ರನು ಕೈರನಾಗಿ ಇಂದ್ರತ್ವಕ್ಕೆ ಅನರ್ಹನಾಗುವನು. ಆದುದರಿಂದ ಇಂದ್ರನ ಇಂದ್ರತ್ವವು ಯಾವುಗಳಿಂದ ಪ್ರಾಪ್ತವಾಗುವುದೋ, ಅಂತಹ ಗೋವುಗಳು ಇಂದ್ರನೆಂದು ಹೇಳಿಸಿಕೊಳ್ಳಲ್ಪಡುವವು. ಇಂತಹ ಗೋಸ್ವರೂಪ ಇಂದ್ರನನ್ನು ಮನಃಪೂರ್ವಕವಾಗಿ ಬಯಸುವೆನು. ಎಂದು ಶ್ರುತಿದೇವಿಯು ಗೋಮಾತೆಯ ಮಹತ್ವವನ್ನು ಸುಕ್ತಕಂಠದಿಂದ ಕೊಂಡಾಡಿರುವಳು. ಬೃಹಸ್ಪಾರಶರಸ್ಮೃತಿಯಲ್ಲಿ—

ಶೃಂಗಮೂಲೇ ಸ್ಥಿತೋ ಬ್ರಹ್ಮಾ ಶೃಂಗಮಧ್ಯೇ ಚ ಶಂಕರಃ ।
ಶೃಂಗಾಗ್ರೇ ಶಂಕರಂ ವಿದ್ಯಾತ್ಸರ್ವದೇವಾಃ ಸ್ಥಿತಾಃ ॥
ಶೃಂಗಾಗ್ರೇ ಸರ್ವತೀರ್ಥಾನಿ ಸರ್ವದೇವಮಯೀ ಹ ಗೌಃ ॥

ಗೋವಿನ ಕೋಡುಗಳ ಬುಡದಲ್ಲಿ ಬ್ರಹ್ಮನೂ, ಮಧ್ಯ ಭಾಗದಲ್ಲಿ ವಿಷ್ಣುವೂ, ಅಗ್ರಭಾಗದಲ್ಲಿ ಶಂಕರರೂ ಮತ್ತು ಸರ್ವತೀರ್ಥಗಳೂ ವಾಸವಾಗಿರುವರೆಂದು ವೇದಗಳು ಸಮಸ್ತ ದೇವತಾಸ್ವರೂಪವಾಗಿರುವೆವೆಂದು ವರ್ಣಿಸಲ್ಪಟ್ಟಿದೆ. ಅಂದಮೇಲೆ ಗೋಮಾತೆಯ ರಕ್ಷಣಾದಿಗಳಿಂದ ಎಂತಹ ಫಲವು ಪ್ರಾಪ್ತವಾಗಬಹುದೆಂಬುದನ್ನು ಬೇರೆ ವರ್ಣಿಸ ಬೇಕಾಗಿಲ್ಲ.

ಹರಂತಿ ಸರ್ವದಾಪಾಂ ಪಾಪಾ ಪೋಷಯಂತಿ ಯಾಃ ।
ಪ್ರಾಸಯಂತಿ ದಿವಾ ದತ್ತಾಃ ಶೃಂಜ್ಯಾ ಗಾವಃ ಕತೋ ನ ತಾಃ ॥

ಯಾವ ಪ್ರಾಣಿಗಳು ತಮ್ಮ ವೇಷಪ್ರಪೂರಮಾತ್ರದಿಂದ ಸಮಸ್ತ ಮಾನವಾಪಗಳನ್ನು ನಾಶಮಾಡುತ್ತವೆಯೋ, ತಮ್ಮ ಹಾಲಿನಿಂದ ಜನಗಳನ್ನು ರಕ್ಷಣನಮಾಡುತ್ತವೆಯೋ ತ್ಯಮ್ಮ ದಾನದಿಂದ (ಗೋದಾನದಿಂದ) ದಾನಮಾಡಿದವರಿಗೆ ಸ್ವರ್ಗಸುಖವನ್ನು ಒಟ್ಟುಮಾಡುತ್ತವೆಯೋ ಅಂತಹ ಗೋವುಗಳು ಯಾರಿಗೆತಾನೇ ಪೂಜ್ಯವೆನಿಸಲಿಲ್ಲಿಲ್ಲ? ಎಲ್ಲವಕ್ಕಿಂತ ಪೂಜ್ಯಗಳಾಗಿರುವೆವೆಂದು ಮಹಾಪುರುಷರು ಗೋ ಮಹಿಮೆಯನ್ನು ನಾನಾರೀತಿಯಾಗಿ ಬಣ್ಣಿಸಿರುವರು.

ಇಂತಹ ಪೂಜ್ಯಗೋವುಗಳ ಸ್ಥಿತಿಯು ಈಗ ನಾಯಿ ಗಿಂತಲೂ ಕೀಳಾಗಿಹೋಗಿದೆ. ಅನೇಕಜನರು ನಿಷಿದ್ಧಗಳಾದ ನಾಯಿಗಳನ್ನು ಕಟ್ಟಿಕೊಂಡು ಅವುಗಳ ಆಹಾರಕ್ಕೂ ರಕ್ಷಣೆಗೂ ನೂರಾರು ರೂಪಾಯಿಗಳನ್ನು ವೆಚ್ಚಮಾಡುತ್ತಿರುವರು. ಆದರೆ ಗೋವುಗಳನ್ನು ಕಟ್ಟಿಕೊಂಡು ಅವುಗಳ ಸೇವೆಮಾಡ್ಲು ಮಾತ್ರುವರಿಲ್ಲ. ಇದು ಕಾಲಮಹಿಮೆ ಯೆಂದೇ ಹೇಳಬೇಕಾಗುವದು. ಇನ್ನು ತೆಲವರು ಮಮ ಸ್ನಾನ ಕೂಡಲೇ ಗೋವುಗಳನ್ನು ಕಟುಕರಿಗೆ ನಾಲರಿಲ್ಕೆ ಕೊಟ್ಟು ಅವುಗಳ ಪ್ರಾಣಹರಣಮಾಡುತ್ತಿರುವರು. ಈ ಕೃತಘ್ನರಿಗೆ ದಾರಿದ್ರ್ಯ-ದುಃಖ-ರೋಗಾದಿ ದೋಷಗಳು ಬಾರದಿರುವವೇ? ಭರತಖಂಡವು ಬುದ್ಧಿಯಿಂದಲೂ, ಶಕ್ತಿಯಿಂದಲೂ, ಐಶ್ವರ್ಯದಿಂದಲೂ ಅವನತಿಯನ್ನು ಹೊಂದುತ್ತಿರುವುದಕ್ಕೆ ಗೋರಕ್ಷಣೆಯು ಅಭಾವವೇ ಮೂಲಕಾರಣವಾಗಿದೆಯೆಂದು ಧಾರಾಳವಾಗಿ ಹೇಳಬಹುದಾಗಿದೆ. ಆದುದರಿಂದ ಭಾರತೀಯರು ಪರಮಪೂಜ್ಯವಾದ ಗೋವುಗಳಲ್ಲಿ ಆನಾದರಭಾವವನ್ನಿಡದೆ ಪೂಜ್ಯ ಬುದ್ಧಿಯನ್ನಿಟ್ಟು ರಕ್ಷಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇನೆ.

## ವರ್ತಮಾನಸಂಗ್ರಹ.

### ಕಾರದರ್ಶಕ ಛತ್ರಿ !

ಅಮೆರಿಕೆಯಲ್ಲಿ "ಸ್ಪಿಟಿಫಿಲ್ಮ್" ಎಂಬ ರಬ್ಬರ್ ಜಾತಿಯ ಒಂದು ಹೊಸವಸ್ತುವನ್ನು ಕಂಡುಹಿಡಿದಿದ್ದಾರೆ. ಇವರಲ್ಲಿ ರಬ್ಬರಿನ ವಾಸನೆಯಾಗಲಿ, ಬಿಗ್ಗಿ ಕುಗ್ಗುವ ಶಕ್ತಿಯಾಗಲಿ, ಗೆಡ್ಡಲು, ಹುಳು ತಿನ್ನುವ ಭಯವಾಗಲಿ ಇಲ್ಲ. ಇದರಿಂದ ತಯಾರಿಸಿದ ಛತ್ರಿಗಳು ಬಿಸಿಲು ಮಳೆಗಳ ಬಾಧೆಯನ್ನು ನಿವಾರಿಸುವದಲ್ಲದೆ, ಗಾಜಿನಂತೆ ಹೊರಗಿನ ಎಲ್ಲ ವಸ್ತುಗಳೂ ಇದರ ಮೂಲಕ ಸ್ಪಷ್ಟವಾಗಿ ಕಾಣಿಸುವವು. ಈಚೆಗೆ ಈ ಸ್ಪಿಟಿಫಿಲ್ಮ್‌ನಿಂದ ಪಾರದರ್ಶಕ ಪರದೆಗಳು, ಬಟ್ಟೆಗಳ ಟೀಲ ಮೊದಲಾದುವನ್ನು ತಯಾರಿಸುವ ಪ್ರಯತ್ನವು ನಡೆಯುತ್ತಲಿದೆ.

### ಪೋಸ್ಟ್ ಜವಾನಸಿಗೆ ಶಿಕ್ಷೆ

ಲಂಡನ್ನಿನ ಆರ್ನಾಲ್ಡ್ ಸ್ಟೂರ್ಟನ್ ಎಂಬ 25 ವರ್ಷ ವಯಸ್ಸಿನ ಪೋಸ್ಟ್ ಜವಾನನು ಪಾವತಿ ಬಿಸ್ಸಿ ತನ್ನ ಕೈಗೆ ಕೊಡಬ್ಬುಟ್ಟಿ ಕಾಗದಗಳನ್ನೂ ಪೋಸ್ಟಲು ಆರ್ಡರುಗಳನ್ನೂ ಪಾವತಿ ಮಾಡದ್ದಕ್ಕಾಗಿ 22 ತಿಂಗಳ ಶಿಕ್ಷೆಗೆ ಗುರಿಯಾದನು. ಇವನ ಮನೆಯನ್ನು ಪೋಲೀಸರು ಹುಡುಕಿದಾಗ 3942 ಕವರುಗಳು ಶಿಕ್ಕವು. ಅವುಗಳಲ್ಲಿ 1191 ಕ್ಕೆ ಒಂದೂವರೆ ಪೆನ್ನಿ ಸ್ಟ್ಯಾಂಪುಗಳು ಅಂಟಿಸಲ್ಪಟ್ಟಿದ್ದವು. ಅವುಗಳಲ್ಲಿ 30 ಇನ್ನೂ ಒಡೆದಿರಲಿಲ್ಲ. ಇವುಗಳಲ್ಲದೆ 300 ಕ್ರಿಸ್‌ಮಸ್‌ಕಾರ್ಡುಗಳೂ ಎರಡುಸಾವಿರ ಇತರ ಕಾಗದಗಳೂ ಸಿಕ್ಕವಂತೆ!

### ಸ್ಪೇನ್ ಪ್ರಜಾ ಸರ್ಕಾರದ ಆಸ್ತಿ(೫೦,೦೦,೦೦೦) ಫ್ರಾಂಕೋ ವಶವಾಯಿತು

ಸ್ಪೇನ್ ಪ್ರಜಾ ಸರ್ಕಾರದವರು ಸುರಕ್ಷಿತವಾಗಿರಲೆಂದು ಫ್ರೆಂಚ್ ಬ್ಯಾಂಕಿನಲ್ಲಿ ಇಟ್ಟಿದ್ದ 80 ಲಕ್ಷ ಪೌಂಡು ಬೆಲೆಯ ಬಂಗಾರವನ್ನು ಫ್ರಾಂಕೋ ಸರ್ಕಾರದ ವಶಕ್ಕೆ ಕೊಟ್ಟುಬಿಡಬೇಕೆಂದು ಫ್ರೆಂಚ್ ನ್ಯಾಯಾಧೀಶರು ತೀರ್ಮಾನಸಮಾಡಿರುತ್ತಾರೆ. ಪ್ರಜಾಸರ್ಕಾರದ ಆಸ್ತಿಯು ಸರ್ವಾಧಿಕಾರಿಯ ಪಾಲಾಯಿತು.

### ಪರಾಕ್ರಮಕಾರಿಯಾಪ ಮಗು !

ಲಂಡನ್ನಿನ ಫೆಲೀಸ್ ರೋಡಿನಲ್ಲಿರುವ ಓರ್ವ ಎಂಬ ದಂಪತಿಗಳಿಗೆ ಒಂದು ವರ್ಷದ ಮಗುವೊಂದಿದೆ. ಇದರ ಎತ್ತರ 2 ಅಡಿ ಇದ್ದು ಅದರ ಶಕ್ತಿಯು ಅತ್ಯದ್ಭುತವಾದದೆ. ಅದು 175 ಪೌಂಡು ತೂಕವಿರುವ ತನ್ನ ತಾತನನ್ನು ಗಾಡಿಯಲ್ಲಿ ಕುಳ್ಳಿರಿಸಿ ಶಳ್ಳಿಕೊಂಡು ಹೋಗಿ ಬಲ್ಲವಂತೆ! ಆ ಮಗುವು ತನ್ನ ತಂದೆತಾಯಿಗೊಡಸಿ ನೋಡಾಟ ಮಾಡುವುದರಲ್ಲೇ ಕಾಲ ಕಳೆಯುತ್ತದಂತೆ!

### ಯಹೂದ್ಯರ ದುರ್ದೈವವು ಡ್ಯಾಷ್ಟಿಗ್‌ಗೂ ದಿಕ್ಕೆಟ್ಟಿತು.

ನಾಜಿ ಬಹುಮತವಿರುವ ಡ್ಯಾಷಿಗ್‌ಸೆನೇಟಿನವರು ಹೊಸದಾಗಿ ಒಂದು ಡಿಕ್ರಿಯನ್ನು ಹೊರಡುಮಾಡಿರುತ್ತಾರೆ. ಇದರಂತೆ ಆಸ್ತಿನ ಯಹೂದ್ಯರು ಪೋಲೆಂಡಿನಲ್ಲಿ ಬಂಡವಾಳವನ್ನು ತಂದು ಡ್ಯಾಂಜಿಗ್‌ನಲ್ಲಿ ವ್ಯಾಪಾರಮಾಡಕೂಡದಾಗಿದೆ. ಈ ಪ್ರತಿಬಂಧಕಾಜ್ಞೆಯು ಫ್ರಿಸಿಟೆಯಲ್ಲಿ ವಾಸಿಸುತ್ತಿರುವ ಪೋಲೆಂಡಿನ ಯಹೂದ್ಯರಿಗೂ ಇನ್ನಯಿಸುತ್ತದೆ. ಆತಂಗ ಯಹೂದ್ಯರ ಬೇಟೆಗೆ ಇಲ್ಲಿಯೂ ಪ್ರಾರಂಭವಾದಂತಾಯಿತು.

### ರಷ್ಯಾ ಜಪಾನ್ ಘರ್ಷಣ

ಮಂಚುಕೋ ಮಂಗೋಲಿಯಾ ಗಡಿಯಲ್ಲಿರುವ ಜಪಾನ್ ಸೈನಿಕರು ಸೋವಿಯಟ್ ಹೊರಮಂಗೋಲಿಯಕ್ಕೆ ಸೇರಿದ 69 ವಿಮಾನಗಳನ್ನು ನೆಲಕಕ್ಕುರುಳಿಸಿದರಂತೆ! ಗಡಿಪ್ರದೇಶದ ಬಲ್ಲಾಗಳ್ ಎಂಬ ನಗರದಿಂದ ಬಂದ ವರ್ತಮಾನವದೆ ಪ್ರಕಾರ ಜಪಾನ್ ಸೈನಿಕರು ಕ್ಯಾಲಾ ನದಿಯ ಪಶ್ಚಿಮ ದಡದಲ್ಲಿ ಬೀಡುಬಿಟ್ಟಿದ್ದ ಸೋವಿಯಟ್ ಸೈನಿಕರೆಮೇಲೆ ಗುಂಡು ಹಾರಿಸಿದರೂ ಅವರು ಪ್ರತಿಯಾಗಿ ಗುಂಡು ಹಾರಿಸಲಿಲ್ಲವೆಂದು ತಿಳಿದು ಬರುತ್ತದೆ.

### ಜೇನುಸೊಣಗಳ ಕಾಟ !

ಲಕ್ಕೋನಗರದ ನ್ಯಾಯಾಧೀಶರ ಕಚೇರಿಯ ಆವರಣದಲ್ಲಿ ಜೇನುಹುಳಗಳ ಪಡೆಯೊಂದು ಬಂದು ಅಲ್ಲಿದ್ದ ವಕೀಲರು, ಕಕ್ಷಿದಾರರು, ಪೋಲೀಸರೇ ಮೊದಲಾದವರನ್ನು ದಿಕ್ಕಾಪಾಲಾಗಿ ಓಡಿಸಿದವು. ಅನೇಕರು ನ್ಯಾಯಾಸ್ಥಾನದ ಸಭಾಂಗಣದೊಳಗೆ ನೆರೆಕೊಂಡು ಕಿಟಕಿ ಬಾಗಿಲುಗಳನ್ನು ಮುಚ್ಚಿಕೊಂಡರು. ಕೆಲವರು ತಮ್ಮ ಪದಾರ್ಥಗಳನ್ನು ಇದ್ದಲ್ಲಿಯೇ ಬಿಟ್ಟು ಮನೆಗೋಡಿದರು. ಜೇನಿನಿಂದ ಕಚ್ಚಲ್ಪಟ್ಟ ಅನೇಕರು ಲಕ್ಕೋ ನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ. ಜೇನಿನ ಕಾಟಕ್ಕೆ ಯೋಗಿ ಇಸು ಅವಾಸುತಕ್ಕೆ ಕಾರಣರಾರೆಂಬು ದನ್ನು ಶೋಧಮಾಡುತ್ತಿದ್ದಾರೆ.

### ಲೋಹದ ಚೂರು ಕಿವಿಯಲ್ಲಿ ಸೈವೇಶಿಸಿ ತೊಡೆಯಿಂದ ಹೊರಗೆ ಬಂದಿತು !

1912 ರಲ್ಲಿ ನಡೆದಿದ್ದ ಬಾಲ್ಕನ್‌ಯುದ್ಧದಲ್ಲಿ ತುರ್ಕಿ ಅಧಿಕಾರಿಯೊಬ್ಬನ ಕಿವಿಗೆ ಲೋಹದ ಚೂರೊಂದು ಪ್ರವೇಶಿಸಿತು. ಇಪ್ಪತ್ತವರ್ಷಗಳವರೆಗೆ ಅವನಿಗೆ ಅದರಿಂದ ಏನೂ ಬಾಧೆಯಂಟುಮಾಡಿಲ್ಲ. 27 ವರ್ಷಗಳಮೇಲೆ ಅವನ ತೊಡೆಯಲ್ಲಿ ನೋವುಕಾಣಿಸಿಕೊಂಡಿತು. ಡಾಕ್ಟರು ಪರೀಕ್ಷಿಸಿದಾಗ ತೊಡೆಯೊಳಗೆ ಲೋಹದ ಚೂರಿರುವುದು ತಿಳಿಯಿತು. ಶಸ್ತ್ರಚಿಕಿತ್ಸೆಯಿಂದ ಅದನ್ನು ಹೊರಗೆ ತೆಗೆದರು. 1912 ರಲ್ಲಿ ಕಿವಿಯಿಂದ ಪ್ರವೇಶಿಸಿದ ಲೋಹದ ಚೂರು ಇಷ್ಟು ವರ್ಷಗಳಲ್ಲಿ ತೊಡೆಯವರೆಗೂ ಇಳಿದುಬರಲು ಆಶ್ಚರ್ಯಕರವಾಗಿದೆ.

### ದಿನಕ್ಕೆ 20 ರೂಪಾ!

ಸಮುದ್ರದ ನೀರಿನಲ್ಲಿರುವ ಒಂದು ಜಾತಿಯ ನೊಣವು ಒಂದು ಘಂಟೆಗಳ ಕಾಲ ಮಾತ್ರ ಬದುಕಿರುತ್ತದೆ. ಆದರೆ ಈ ವಿಚಿತ್ರ ಪ್ರಾಣಿಯು ತನ್ನ ಈ ಅಲ್ಪಾಯುಷ್ಯವನ್ನಲ್ಲಿ ಪ್ರತಿದಿನ ಕನಿಷ್ಠ 20 ಸಲವಾದರೂ ತನ್ನ ಹಳೆಯ ಚರ್ಮವನ್ನು ಕಳೆದು ಹೊಸಹೊಸ ಚರ್ಮವನ್ನು ಹೊಂದುವದಂತೆ!

### ಡ್ಯಾನ್ಸಿಗ್ ಪರಿಷತ್ತಿ

ಪೂರ್ವಪ್ರಪ್ರಥಮದ ಮುಖಂಡತ್ವದಲ್ಲಿ ಡ್ಯಾನ್ಸಿಂಗ್ಗಿನ ಪ್ರಾಯಿಕ ಸೈನ್ಯಸಂಸ್ಥೆಗಳು ಒಂದಾಗಿ ಸೇರಿನೆಯೆಂದು ಸುದ್ದಿ ಯಾಗಿದೆ. ಈ ಸಂಯುಕ್ತಸೈನ್ಯವು ಜರ್ಮನ್ ಸೈನ್ಯದ ಒಂದು ಭಾಗವಾಗಿ ಆಗಸ್ಟ್ ಕೊನೆಯಲ್ಲಿ ನಡೆಯುವ ಪಾರಿ ಸೈನ್ಯಪರೀಕ್ಷಣಸಮರ್ಪಣದಲ್ಲಿ ಭಾಗವಹಿಸುವ ದೆಂದು ನಿರೀಕ್ಷಿಸಲಾಗಿದೆ. ಸ್ಪರ್ಧಾ ಅನೇಕಪಾಶ್ಚಾತ್ಯಲೆಗಳ ನ್ನು ಸೈನ್ಯದ ಬ್ಯಾಂಡ್‌ಗಳಾಗಿ ಉಪಯೋಗಿಸಲಿರುವದ ರಿಂದ ಹುಡುಗರಿಗೆ ಬೇಸಿಗೆ ರಜವು ಹೆಚ್ಚುಕಾಲ ಕೊಡ ಲ್ಪಡುವದು.

### ಈಜಿಪ್ಟಿಗೆ ಭಾರತದ ಸೈನ್ಯ

ಭಧರತಖಂಡದಿಂದ ಈಜಿಪ್ಟಿಗೆ ಕೆಲವು ತರಗತಿ ಸೈನಿಕ ರನ್ನು ಶೀಘ್ರದಲ್ಲೇ ಕಳುಹಿಸಲಾಗುವದೆಂದು ಯುದ್ಧ ಆಡಳಿತಾಧಿಯವರು ಒಂದು ಪ್ರಕಟನೆಯನ್ನು ಹೊರಡಿಸಿರು ತ್ತಾರೆ. ಮೆಡಿಟರೇನಿಯನ್ ಪ್ರಾಂತ್ಯದಲ್ಲಿ ವಿಶೇಷ ಪ್ರಾಮುಗಳನ್ನು ಕೈಕೊಳ್ಳುವದಕಾಗಿಯವದಂತೆ ಈ ಸೈನ್ಯ ವು ಹೋಗುವರೆಂದು ಹೇಳಲಾಗಿದೆ. ಈ ಚಿಲದನ ಪ್ರೋಚನೆಯು ಈಗ್ಗೆ ಸ್ವಲ್ಪ ಕಾಲದಿಂದ ಸರ್ಕಾರದ ಮನಸಂನದಲ್ಲಿತ್ತು. ಈ ತೀರ್ಮಾನವನ್ನು ಈಜಿಪ್ಟ್ ಸರ್ಕಾ ರದವರೂ ಒಪ್ಪಿರುತ್ತಾರೆ. ಪ್ಯಾಲಸ್ಟೈನ್ ಕಾಂತರಕ್ಷಣೆ ಗಾಗಿ ಈ ಸೈನ್ಯವನ್ನು ಕಳುಹಿಸುತ್ತಿಲ್ಲವೆಂಬುದನ್ನು ಎಲ್ಲರೂ ತಿಳಿದರಬೇಕೆಂದು ಹೇಳಲಾಗಿದೆ.

### ಜಲಸಂಗ್ರಹವಾದ ಫೆಟಿಸ್ ನೌಕೆಯನ್ನು ಮೇಲೆತ್ತುವ ಪ್ರಯತ್ನ.

ಸಮುದ್ರ ತಳದಲ್ಲಿ ಕುಳಿತ "ಫೆಟಿಸ್" ಎಂಬ ಅಂತ ರ್ರಾಷ್ಟ್ರೀಯವಾದ ನೌಕೆಯನ್ನು ಮೇಲಕ್ಕೆತ್ತುವ ಪ್ರಯತ್ನ ಗಳು ನಡೆಯುತ್ತಿವೆ. ಅದನ್ನು ಎತ್ತಲು ಇನ್ನೂ ಎಂತು ಹೊಸ ವಾರಗಳು ತಡವಾಗಬಹುದು. ಏಕೆಂದರೆ ಅದ ನ್ನು ಮೇಲೆತ್ತುವದಕ್ಕೆ ಸಹಾಯಮಾಡುವ "ಜೋರ" ಎಂಬ ಹಡಗಿನಲ್ಲಿ ಇನ್ನಷ್ಟು ಬಲಪಡಿಸುವ ಯತ್ನ ನಡೆ ಯುತ್ತಿದೆ. ಈ ಮಧ್ಯೆ ಕ್ಯಾಮೆಲ್ ಲೈರ್ಡ್ಸ್ ಮಗ್ಗನೇ ಜೊಗ ದಿಕ್ಕೆರ್ಪರದೂ ಮತ್ತು ಹೌಸ್ ಆಫ್ ಕಾಮ ನ್ಸ್ ಸದಸ್ಯರಾದ ವಿ. ಲಾಕಲ್‌ಲ್ಯಾಂಪ್ಸನ್‌ರವರೂ ಈ ಸಲ್ವೇಗಾರನನ್ನು ಎತ್ತಕಾಡಬೇಡಿಯೆಂದು ಹೇಳಿಕೆಗಳನ್ನು ಹೊರಡಿಸಲು ಪ್ರಾರಂಭಿಸಿದ್ದಾರೆ. ಈ ವಿಷಯವು ಶೀಘ್ರ ದಲ್ಲೇ ಹೌಸ್ ಆಫ್ ಕಾಮನ್ಸ್‌ನಲ್ಲಿ ಚರ್ಚೆಗೆ ಬರುವ ಹಾಗೆ ಮಾಡಿ ನಿರೀಕ್ಷಿಸಲಾಗಿದೆ. ಆದರೆ ನಿಧನೊಂದಿನವರ ಬಂಧುಗಳು ಮೃತರಾದವರನ್ನು ನೋಡಲು ಕಾತುರ ರಾಗಿದ್ದಾರೆ.

### ಅಮೆರಿಕೆಯನ್ನು ಕಂಡುಹಿಡಿದವರು ಭಾರತೀಯರಂತೆ!

ಈ ಪ್ರಕಂಚನನ್ನು ೫೫ ಸಾರೆ ಪ್ರಪಕ್ಷನೆಮಾಡಿ ಈಗ ಅಲ್ಪತ್ತೈಗೆ ಬಂದಿರುವ ವಿ॥ ಚಿವಿನಲಾಲರು, ಅಮೆರಿಕಾ ಖಂಡವನ್ನು ಪ್ರಥಮತಃ ಭಾರತೀಯರು ಕಂಡುಹಿಡಿದ ರೆಂದೂ, ಸೃಷ್ಠಾಂತರವು ಭಾರತೀಯರಿಂದ ಇನ್ನೇರಿಕೆಯ ಪ್ರಗತಿಹೊಂದಿತೆಂದೂ ಆಧಾರಸಹಿತವಾಗಿ ಸಿದ್ಧಾಂತಪಡಿಸಿ ರುವರು. ಇವರು ಪಲಿ ಮಾಳವೀಯರೇ ಮೊದಲಾದ ಪ್ರಾಚಾರಶಾಸ್ತ್ರಜ್ಞರುಗಳ ಕಂದು ತಮ್ಮ ಸಿದ್ಧಾಂತವನ್ನು ಸಮರ್ಥಿಸಿರುವರು. ಇವರು ಪಲಿ ಮಾಳವೀಯರೇ ಮೊದಲಾದ ಪ್ರಾಚಾರಶಾಸ್ತ್ರಜ್ಞರುಗಳ ಕಂಡ

[೩ ನೆಯ ಪುಟದಿಂದ ಮುಂದುವರೆದುದು]

ರನ್ನು ಇಲ್ಲಿಗೆ ಸ್ವಾಗತಿಸ ಬೆಯು ನಮಗೆ ವಿಶೇಷ ಸಂತೋಷದ್ರವಾಗಿದೆ ಈ ಸುಸಮಯದ ವಕಾಶವು ಮಹಾಸ್ವಾಮಿ ಯವರಿಗೆ ಪ್ರಿಯವೂ ಹಿತಕರವೂ ಆಗಿ ಸಿದ್ಧಿಯಾಲು ಇಲ್ಲಿಗೆ ವರ್ಷ ವರ್ಷವೂ ಆಗಮಿಸುವ ಸೌಭಾಗ್ಯದ ಶಕ್ಯವು ನಮಗೆ ಅನುಗ್ರಹಿಂತವಾಗ ಲೆಂದೂ ಜೆಲ್ಲೆಯು ಪ್ರತಿಗೆ ತಪ್ಪಿಸ್ಥಾಲಕ ಸಸ್ಥಾನದಲ್ಲಿ ವರ್ಷಂಪ್ರತಿ ಪ್ರತ್ಯಕ್ಷರಾಗಿ ರಾಜಭಕ್ತಿಯನ್ನರ್ಪಿಸುವ ಸುಯೋಗವು ನಮಗೆ ಲಭಿಸಲೆಂಬೂ ಪ್ರಾರ್ಥಿಸುವೆವು

ಈ ಹಿಂದೆ, ೧೯೫೩ ರಲ್ಲಿ ಮಹಾಸ್ವಾಮಿಯವರು ಮಾರಕೋನಹಳ್ಳಿಯ ಜಲಾಶಯ ನಿರ್ಮಾಣಕಾರ್ಯ ಸಂಸ್ಥಾಪನೆಯನ್ನು ಕೃಪೆಮಾಡಲು ಚೆತ್ತಿಸಿದೆ ಕ್ರಮ ಸಮಯದಲ್ಲಿ ಸನ್ನಿಧಾನಕ್ಕೆ ಬಿನ್ನವತ್ತಳೆಯೊಂದನ್ನರ್ಪಿಸುವ ಸುಸಂಧಿಯು ನವ್ಯ ಬೋರ್ಡಾನವರಿಗೆ ಲಭಿಸಿತು ಆ ಜಲಾಶಯದ ನಿರ್ಮಾಣದಿಂದ ಮಹಾಸ್ವಾಮಿಯವರು ಈ ಜಿಲ್ಲೆಯ ಅನಾವೃಷ್ಟಿಪ್ರದೇಶದ ಭಾಗ್ಯ ವಿಧಾತರಲ್ಲಿ ಪ್ರಾಶಸ್ತ್ಯವಾಭ ವಿಳೆಗೆಯನ್ನು ಅನುಗ್ರಹಿಸೋಣವಾಯಿತು ಈ ಮಹೋಪಕಾರಕ್ಕಾಗಿ ನಮ್ಮ ಗಾಢವಾದ ಕೃತಜ್ಞತೆಯನ್ನರ್ಪಿಸಲು ಆಜ್ಞೆಯನ್ನು ಬೇಡುತ್ತೇವೆ

ಆ ಸಂದರ್ಭದಲ್ಲಿಯೇ ನಾವು ಸನ್ನಿಧಿಯಲ್ಲಿ ನಮ್ಮ ಕಾರ್ಯಕಲಾಪಗಳ ಸಕ್ಷಿಪ್ತ ವರದಿಯನ್ನರ್ಪಿಸಿದ್ದವು ಇತ್ತೀಚೆಗೆ ನಮ್ಮ ಕಾರ್ಯ ಮುಂದರಿದು ಅಭಿವೃದ್ಧಿಯು ನೆರವೇರಿದೆಯೆಂದು ಅರಿಕೆಮಾಡಲು, ಅಕ್ಕರೆ ಬೀರುತ್ತೀವೆ ನವ್ಯ ಅಡಳಿತದಲ್ಲಿ ೧೯೫೮-೫೯ ನೆಲಿ ಮೈಲಿಗಳ ದೂರದ ರಸ್ತೆಯಿದ್ದರು ಈವರೆಗೆ ೨೧೨ ಮೈಲಿಗಳ ಗ್ರಮಾಣಕ್ಕೆ ಹೆಚ್ಚಿದೆ ಅಶ್ವಶ್ಯಕತೆಗೆ ಸಂಪೂರ್ಣ ಅನುಸಾರವಾಗಿ ಸೂಲಗಿತ್ತಿಯರ ಸಂಖ್ಯೆಯು ೩೦ರಿಂದ ೩೭ಕ್ಕೂ ಹೆಚ್ಚಿದೆ ಅಲ್ಲದೆ ೪೭ ಮೈಲಿಗಳ ರಸ್ತೆಯು ತಯಾರಾಗುತ್ತಿದೆ. ಇನ್ನೂ ೧೫೭ ಮೈಲಿಯ ದೂರದ ಮಾರ್ಗರಚನೆಯು ಸರ್ವೇಕ್ಷಣೆಯಲ್ಲಿದೆ ಸರ್ಕಾರಿ ಮತ್ತು ಜಿಲ್ಲಾ ಫಂಡಿನ ರಸ್ತೆಗಳು ಸೇರಿ ಒಟ್ಟು ೧೦೨ ಮೈಲಿಗಳಷ್ಟಾಗುವುದರಿಂದ ನಮ್ಮ ಜಿಲ್ಲೆಯಲ್ಲಿ ಸರಾಸರಿ ನಾಲ್ಕುನರೆ ಚದರ-ರಸ್ತೆಗೆ ವಿಸ್ತೀರ್ಣಕ್ಕೆ ಒಂದು ಮೈಲಿ ರಸ್ತೆ ಇದ್ದಂತಾಗುತ್ತದೆ ತಯಾರಾಗುತ್ತಿರುವ ರಸ್ತೆಯ ಕೆಲಸವು ಪೂರ್ಣಗೊಂಡರೆ ಸರಾಸರಿ ನಾಲ್ಕು, ದಶಮಾಂಶ, ಮೂರು, (೪.೩) ಚದರ ಮೈಲಿಗಳ ವಿಸ್ತೀರ್ಣಕ್ಕೆ ಒಂದು ಮೈಲಿ ಉದ್ದ ರಸ್ತೆಯಿರುವ ಪ್ರಮಾಣಕ್ಕೆ ಬರುವುದು ಜಿಲ್ಲಾ ಪ್ರಸ್ತುತ ಆರ್ಥಿಕ ಸ್ಥಿತಿಯು ಪರಿಮಿತವಾಗಿದ್ದು, ಹೆಚ್ಚುವರಿಗೆ ಅವಕಾಶವಿಲ್ಲದಿದ್ದರೂ ಸಾಲೂಸೋಲಗಳಿಗೆ ಒಳಪಡದೆ, ಸಂಚಾರದ ರಸ್ತೆರಚನೆ ಅಶ್ವಶ್ಯಕತೆಗಳ ಸ್ಥಾಪನೆ ಸೂಲಗಿತ್ತಿಯರನ್ನು ನೇಮಿಸುವುದು ಈ ರೀತಿಗಳಲ್ಲಿ ಇನ್ನು ಅಭಿವೃದ್ಧಿ ಕಾರ್ಯಗಳನ್ನು ಈಡೇರಿಸಿದೆ ಇತ್ತೀಚೆಗೆ ಕೊರಟಗೆರೆಯಲ್ಲಿ ಒಂದು ಪಶುವೈದ್ಯಶಾಲೆಯನ್ನು ಸ್ಥಾಪಿಸಿದ್ದಾಯಿತು ಇದಲ್ಲದೇ ಜಿಲ್ಲೆಯಲ್ಲಿ ಒಟ್ಟು ೧೧ ಪಶುವೈದ್ಯಶಾಲೆಗಳಿವೆ ಮೂಕಪ್ರಾಣಿಗಳ ಸಂಕ ಷ್ಟಿವಾರಣೆಗೆ ಚಿಕಿತ್ಸಾ ಸಹಾಯವನ್ನು ಕೊಡಬಲ್ಲ ಅನುಕೂಲವನ್ನು ಎಲ್ಲಾ ತಾಲ್ಲೂಕುಗಳಲ್ಲಿಯೂ ಒದಗಿಸಿದಂತಾಗಿದೆ

ಈ ಯೋಗ್ಯರೀತಿಯಲ್ಲಿ ನಾವುಗಳು ಮಾಡಿರುವ ಅಲ್ಪಸೇವೆಯ ಪ್ರಯತ್ನಗಳು ಮಹಾಸ್ವಾಮಿಯವರ ಶ್ರೀಪಾದೋಕ್ಷಣೆಕ್ಕೆ ಪರಿಬರುವುದೆಂದೂ, ಮಹಾಸ್ವಾಮಿಯವರ ದಯಾಳು ಸರ್ಕಾರದ ಸಹಾಯ ಪ್ರೋತ್ಸಾಹಗಳಿಗೆ ಪಾತ್ರವಾಗಿರುವುದೆಂದೂ ನಾವು ನಂಬುವೆವು ಜಿಲ್ಲಾ ಬೋರ್ಡುಗಳ ಆರ್ಥಿಕ ಸ್ಥಿತಿಗತಿಗಳನ್ನು ಪರಿಶೀಲಿಸಿದ ವಿಶೇಷ ಸಮಿತಿಯು ವರದಿಗಳುಗುತ್ತಾವಾಗಿ ಮಹಾಸ್ವಾಮಿಯವರ ಸರ್ಕಾರದ ಅನುಕೂಲವಾದ ಮಂಜೂರಾತಿಯು ಲಭಿಸಿದರೆ ಈ ಜಿಲ್ಲಾ ಸಂಸ್ಥೆಯ ಸ್ಥಿತಿಯಲ್ಲಿ ಮೇಲ್ಮೆಯುಂಟಾಗಿ ನಮ್ಮ ಕಾರ್ಯಕಲಾಪಗಳು ವಿಸ್ತರಿಸಿ ಫಲಕಾರಿಯಾಗುವುದೆಂದು ಹಾರೈಸಿ ಅಶಕ್ತಿಯಿಂದ ವಿಜ್ಞಪ್ತಿಸುತ್ತಿರುವೆವೆ.

ಈ ಜಿಲ್ಲೆಯಲ್ಲಿ ಸದ್ಯದಲ್ಲಿ ಪಾಲಶಾಲೆಗಳಿಗೆ ೩, ತುಮಕೂರಿನಲ್ಲಿ ಪಾಲಶಾಲೆಗಳಿಗೆ ಮಾತ್ರ ೧ ಅಂತೂ ನಾಲ್ಕು ಪ್ರೌಢಪಾಠಶಾಲೆಗಳೂ (ಹೈಸ್ಕೂಲು) ಒಂದು ಬೋಧಕ ಶಿಕ್ಷಣಶಾಲೆಯೂ (ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲ್), ೫೩ ಮಾಧ್ಯಮಿಕ ಪಾಠಶಾಲೆಗಳೂ, ಒಂದು ವೃತ್ತಿಯ ಶಿಕ್ಷಣ ಶಾಲೆಯೂ, ಅರು ಸಾರ್ವತ್ರಿಕ ಉಪಯೋಗದ ಪುಸ್ತಕ ಭಾಂಡಾರ ಮತ್ತು ಪಾಚನಾಲಯಗಳೂ ಇರುವುವು. ಒಂದು ಸ್ತ್ರೀಪಾಠಶಾಲೆಯಲ್ಲಿಯೂ ಒಂಭತ್ತು ಮಾಧ್ಯಮಿಕ ಪಾಠಶಾಲೆಗಳಲ್ಲಿಯೂ ಒಂಭತ್ತು ಮಾಧ್ಯಮಿಕ ಪಾಠಶಾಲೆಗಳಲ್ಲಿಯೂ ನೆಯೆ ಮಠಗಳಿಗೆ ಸೇರಿಲ್ಲ ಕೃಷಿ ಈ ಮುಂತಾದುವುಗಳಲ್ಲಿ ಔದ್ಯೋಗಿಕ ಶಿಕ್ಷಣವನ್ನು ಕೊಡಲಾಗುತ್ತಿರುವುದು ಕಾಲೇಜ್ ವಿದ್ಯಾಭ್ಯಾಸದ ಸಂಸ್ಥೆಯು ಅಕ್ಕಗಕ್ಕವಾಗಿರುವುದರಿಂದ ಇಂಟರ್‌ಮೀಡಿಯೇಟ್ ಕಾಲೇಜೊಂದು ಪುನಃ ಸದ್ಯದಲ್ಲಿಯೇ ಸ್ಥಾಪನೆಯಾಗುವಂತೆ ಕೃಪೆಮಾಡಿಸೋಣವಾಗಬೇಕಾಗಿ ತೀವ್ರತರ ವಿನಂಬಪೂರ್ವಕವಾಗಿ ಪ್ರಾರ್ಥಿಸುತ್ತೀವೆ

ಪ್ರಾಥಮಿಕ ವಿದ್ಯಾಭ್ಯಾಸದಂತಹ ಮೂಲ್ಯ ವಿಚಾರದಲ್ಲಿ ನಮಗಿರುವ ತೀವ್ರಾಸಕ್ತಿಗನುಗುಣವಾದೆಯು ಅಭಿವೃದ್ಧಿಯು ಶಕ್ಯವಾಗಿಲ್ಲ ಪ್ರಾಥಮಿಕ ಪಾಠಶಾಲೆಗಳ ಸಂಖ್ಯೆಯು ೧೯೫೬-೫೭ ರಲ್ಲಿ ೬೮೯ ರಲ್ಲಿ ಅಗಿದ್ದ ಸದ್ಯದಲ್ಲಿ ೬೬೨ ಕ್ಕೆ ಕೆಟ್ಟಿದೆ ಈ ಸಂಬಂಧದಲ್ಲಿ ಈ ಪೆಸ್ಟೆಯು ಇಚ್ಛಾಶಕ್ತಿಗಳಲ್ಲಾಗಲಿ ಪ್ರಯತ್ನಗಳಲ್ಲಾಗಲಿ ಹಿಂದು ಳಿದಿಲ್ಲ ಆದರೆ ಆರ್ಥಿಕ ಪರಿಮಿತಿಯ ಇಕ್ಕಟ್ಟಿಗೆ ಸಿಲುಕಿದೆ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಸಾರದ ಸಮಸ್ಯೆಗಳನ್ನು ಪರಿಶೀಲಿಸಿಸಲು ಸರ್ಕಾರದಿಂದ ನೇಮಕವಾಗಿರುವ ಸಮಿತಿಯವರು ಇನ್ನು ಮುಂದೆ ಕೊಡುವ ಸಲಹೆಗಳಂತೆ ಗ್ರಾಮಾಂತರಗಳಲ್ಲಿ ಸಾರ್ವತ್ರಿಕ ಪ್ರಾಥಮಿಕ ವಿದ್ಯಾಭ್ಯಾಸದಸ್ಟೇ ಫಲಕಾರಿಯಾದ ವಿದ್ಯಾರ್ಥಿ ದೊಡ್ಡು ಕಾರ್ಯೋನ್ಮುಖಕ್ಕೆ ಬಂದೀತೆಂಬು ಹಾರೈಸುವೆವು

ಈ ಬೋರ್ಡಿನವರು ನೆರವೇರಿಸಿರುವ ಉಪಯುಕ್ತವಾದ ಇನ್ನು ಕಾರ್ಯವಾದರೂ ನಿಮ್ಮ ಸಂಸ್ಥೆಯದ ಸರ್ಕಾರದ ಮತ್ತು ಇದರ ಮುಖ್ಯ ಸೂತ್ರವನ್ನು ಹಿಡಿದಿರುವರಾದ ದಿವಾನ್ ಆರ್ಮಿ-ಉಲ್ ಮುಲ್ಕ್ ಸರ್ ಮಿರ್ಜ ಮಹಮದ್ ಇಸ್ಮಾಯಿಲ್‌ರವರ ಶ್ರೀಪಥಾಮಯ ಮತ್ತು ಉದಾತ್ತವಾದ ರಾತಿನೀತಿಗಳ ಮತ್ತು ಸಂತಕವಾದ ಸಹಾಯ ಸಹಾನುಭೂತಿಗಳ ಫಲವಾಗಿದೆ ಈ ಕಾರಣದಿಂದ ಮಹಾಸ್ವಾಮಿಯವರ ಸರ್ಕಾರಕ್ಕೆ ನನ್ನ ಹೃಶಾಜ್ಞ ತಾಪೂರ್ವಕವಾದ ವಂದನೆಗಳನ್ನು ಅರ್ಪಿಸುವೆವು

ಈ ಸುಸಂಧಿಯಲ್ಲಿ ನಮ್ಮ ಬಿನ್ನವತ್ತಳೆಯನ್ನು ಪಂಗೀಕರಿಸಲು ಕೃಪೆಯಿಂದ ಅನುಮತಿಯನ್ನು ಬಯಪಾಲಿಸಿದುದಕ್ಕೆ ನಾವು ಅತ್ಯಂತ ಕೃತಜ್ಞರಾಗಿದ್ದೇವೆ. ಮಹಾಸ್ವಾಮಿ ಮತ್ತು ನಮ್ಮ ಗಾಢವ್ಯಾ ಗೌರವಪೂರಿತವೂ ಆದ ರಾಜಭಕ್ತಿಯನ್ನು ಅರ್ಪಿಸುವೆವೆ. ಮಹಾಸ್ವಾಮಿ ಜಗದೀಶ್ವರನು ಮಹಾಸ್ವಾಮಿಯವರಿಗೂ, ರಾಜಕುಟುಂಬದವರಿಗೂ ದೀರ್ಘಾಯುಸ್ಸನ್ನೂ ಸಮಸ್ತ ಸಸ್ಯಂಗಳಗಳನ್ನೂ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಬಿನ್ನವತ್ತಳೆಯನ್ನು ರಜತಕರಂಡದಲ್ಲಿಟ್ಟು ಶ್ರೀಮನ್ಮಹಾರಾಜರಿಗೆ ಭಕ್ತಿಪುರಸ್ಸರವಾಗಿ ಅರ್ಪಿಸಲಾಯಿತು.

## ಶ್ರೀಮನ್ಮಹಾರಾಜರವರ ಭಾಷಣ

ಬಿನ್ನವತ್ತಳೆಗಳನ್ನು ಸ್ವೀಕರಿಸಿ ಶ್ರೀಮನ್ಮಹಾರಾಜರು ತಿಳಿಗನ್ನಡದಲ್ಲಿ ಈ ರೀತಿ ಭಾಷಣಮಾಡಿದರು.

ತುಮಕೂರು ಪೌರಸಭೆಯ ಮತ್ತು ತುಮಕೂರು ಡಿಸ್ಟ್ರಿಕ್ಟು ಬೋರ್ಡಿನ ಸದಸ್ಯರುಗಳೇ,

ಈ ಊರಿಗೆ ಆಗಮಿಸಿರುವುದಕ್ಕಿಂದ ಮೊದಲೇ ನಮಗುಂಟಾಗಿದ್ದ ಮಹೇಶ್ವರ ಸಂತೋಷವನ್ನು ನಿಮ್ಮಿಂದ ಲಭಿಸಿರುವ ಆದರಪೂರಸ್ಕೃತವಾದ ಸ್ವಾಗತವು ಮತ್ತಷ್ಟು ಅಧಿಕಗೊಳಿಸಿರುತ್ತದೆ ನಮ್ಮ ಆಗಮನಕಾರ್ಯವಾದ ಸಂತೋಷಾತಿಶಯಗಳನ್ನು ಸೂಚಿಸುವುದಕ್ಕಾಗಿ ಈ ಡಿಸ್ಟ್ರಿಕ್ಟಿನ ಅಷೇಕ ಭಾಗಗಳಿಂದ ತಂಡತಂಡವಾಗಿ ಇಲ್ಲಿಗೆ ಬಂದಿರತಕ್ಕ ಪ್ರೀತಿಪಾತ್ರರಂದ ನಮ್ಮ ಪ್ರಜೆಗಳ ಭಕ್ತಿವಿಶ್ವಾಸಗಳು ಮನಮುಟ್ಟಿ ಗೋಚರವಾಗಿ, ನಾವು ಅತಂದಿತುಂದಿಲ ಸ್ವಾಂತರಾಗಿರುವೆವು.

ನಾವು ಈ ದಿನ ಇಲ್ಲಿಗೆ ಆಗಮಿಸಿದಾಗ, ತೋರುದುದ್ದಕ್ಕೂ ವ್ಯವಸಾಯ ಕ್ಷೇತ್ರಗಳು ಪಚ್ಚೆಯ ಹಾಸಿನಂತೆ ನಯನಮನೋಹರಗಳಾಗಿ ರಾಜಿಸುತ್ತ, ಮುಂದಿನ ಧಾನ್ಯಸಮೃದ್ಧಿ ಸೂಚಕಗಳಾಗಿದ್ದವು ಕಂಡು ಸಂತೋಷಿಸಿದೆವು. ಇದುವರೆಗೇನೋ ಕೃಪಿಕರವಾಗಿರುವಷ್ಟಿಗೆ ಸುವೃಷ್ಟಿಯಾಗಿ ಅನುಕೂಲವುಂಟಾಗಿದೆ. ಮುಂದಿನ ತಿಂಗಳಲ್ಲಿ ಸಕ್ಕ ಸಮೃದ್ಧವಾದ ಸುವೃಷ್ಟಿಯಾಗಿ, ತಟಾಕಾದಿ ಜಲಾಶಯಗಳಲ್ಲಿರುವ ನೀರು ತುಂಬಿ, ತರೇ ಬೆಳೆಗೂ ಕೃಷಿಕರ ಮಃಪ್ಯವಲಂಬವಾದ ದನಕರುಗಳ ಮೇವಿಗೂ ಅನುಕೂಲಿಸುವಂತೆ ಜಲಸಮೃಯುಂಟಾಗಲೆಂದು ನಾವು ಹಾರೈಸುವೆವು. ಮಾರಕೋನಹಳ್ಳಿಯ ಜಲಾಶಯವೂ ಅದರ ಹಾಲೆಗಳೂ ನಿರ್ಮಾಣವಾದಮೇಲೆ ಬಹು ಭಾರಿಯಾದ ಭೂ ವಿಸ್ತೀರ್ಣವು ನೀರಾವರಿ ವ್ಯವಸಾಯಕ್ಕೆ ಬರುವ ಅನುಕೂಲವುಂಟಾಗಿ ತನ್ಮೂಲಕ ನೆರೆಹೊರೆಯ ಪ್ರದೇಶಗಳ ಜನರ ಆಭ್ಯುದಯಕ್ಕೆ ಸಾಧಕವಾಗುವುದೆಂದೂ ಸಕ, ನಾವು ನಾರೈಸುವೆವು

ಡಿಸ್ಟ್ರಿಕ್ಟು ಬೋರ್ಡು ಮಂದಿರ, ಹರಪ್ಪರ ಸಹಾಯ ಸಂಘ ಮಂದಿರ, ಮತ್ತು ಡಿಸ್ಟ್ರಿಕ್ಟಿನ ಪುಸ್ತಕಭಾಂಡಾರ ಮಂದಿರ—ಈ ಮೂರು ಕಟ್ಟಡಗಳ ಅಸ್ತಿವಾರ ಶಿಲೆಗಳನ್ನು ಪ್ರತಿಷ್ಠಿಸಿ, ಈ ಊರಿನ ವಿದ್ಯಾದಿಪ್ರೋತ್ಸವ ವನ್ನೂ ನೆರವೇರಿಸುವುದಕ್ಕಾಗಿ ಈಗ್ಗೆ ಹತ್ತುವರ್ಷಗಳ ಹಿಂದೆ ನಾವು ಇಲ್ಲಿಗೆ ಆಗಮಿಸಿದ್ದೆವು. ತುಮಕೂರಿನಲ್ಲಿ ಕಂಡರೆ ನಮಗೆ ಆತ್ಯಾದರವುಂಟೆಂದು ನಿಮ್ಮೆಲ್ಲರಲ್ಲಿ ಭರವಸೆ ಕೊಡುವೆವು ಈಗಿನ ನಮ್ಮ ಆಗಮನವು ಚಿರಾಭಿಲಷಿತವಾಗಿ ನಮ್ಮ ಮನಸ್ಸಿಗೆ ಬಹಳ ಹಿತಕರವಾಗಿದೆ ಪರತ್ಯರ್ಯಂತವಾಗಿ ಈ ಊರಿನಲ್ಲಿ ನೆರವೇರಿಯ ಅಭಿವೃದ್ಧಿಕಾರ್ಯಗಳನ್ನು ನಮ್ಮ ಪ್ರಯಾಸದ ಅಲ್ಪಾವಧಿಯಲ್ಲಿ ಪ್ರತ್ಯಕ್ಷವಾಗಿಯೂ ನಿಕಟವಾಗಿಯೂ ಪರಿಶೀಲಿಸಿ ನೋಡುವೆವೆ ಅಲ್ಲದೆ ಡಿಸ್ಟ್ರಿಕ್ಟು ಬೋರ್ಡಿನವರ ಅಡಳಿತಕ್ಕೆ ವಹಿಸಿರುವ ಪ್ರಜಾಹಿತಸಾಧಕವಾದ ನಾನಾ ಕಾರ್ಯಕಲಾಪಗಳು ನೆರವೇರಿಯುವುದನ್ನು ವಿಶದ ನಾನಾ ಅವಕಾಶಗಳಿಗೆ ತಂದುಕೊಟ್ಟವರ ಅವಕಾಶವೂ ನಮಗೆ ಲಭಿಸುವುದಾಗಿದೆ ವಿದ್ಯಾಭಿವೃದ್ಧಿ, ಕೈಗಾರಿಕೆಗಳ ಅಭಿವೃದ್ಧಿ, ವೈದ್ಯಕಸಾಯ, ಸ್ವಯನೈರ್ಮಲ್ಯ ಸಾಧನವಾದ ನಾನಾ ಮೇಲ್ಬಟ್ಟುಗಳು, ಮತ್ತು ನೂತನ ಸಂಚಾರಮಾರ್ಗ ನಿರ್ಮಾಣ—ಇವುಗಳ ಸಂಬಂಧವಾದ ಕಾರ್ಯಕಲಾಪಗಳನ್ನು ಕೈಕೊಂಡು ಪೌರರ್ಯಗಳನ್ನು ಕಲ್ಪಿಸುವುದು ಅಧಿಕಾರವಾಗಿ ಅವಶ್ಯಕವಾಗುತ್ತ ಬರುತ್ತಿದೆ ಕದನುಗುಣವಾಗಿ ಪೌರಸಭೆಯ ವರೂ ಡಿಸ್ಟ್ರಿಕ್ಟು ಬೋರ್ಡಿನವರೂ ನೆರವೇರಿಸುವ ಸಮಸ್ತ ಕಾರ್ಯಗಳನ್ನೂ ನಾವು ಗಮನಕ್ಕೆ ತಂದು ಕೊಂಡು ಅತ್ಯಂತವಾಗಿ ಹರ್ಷಿಸುತ್ತಿದ್ದೇವೆ. ಪೌರ ಸಭೆಯ ಮತ್ತು ಡಿಸ್ಟ್ರಿಕ್ಟು ಬೋರ್ಡಿನ ಸದಸ್ಯರುಗಳಾದ ಮಾಹಶಯರೇ, ನೀವುಗಳು ನಿರ್ವಹಿಸುತ್ತಿರುವ ಪ್ರಜಾಸೇವಾಕಾರ್ಯವು ಶ್ಲಾಘನೀಯವಾದುದು. ದೇಶಭಾಂಧವರ ಹಿತಸಾಧನೆಗಾಗಿ ಶ್ರಮಿಸಿ ಉತ್ಸಕರಿಸಲು ನಿಮಗೆ ಆಸಾಧಾರಣವಾದ ಅವಕಾಶವು ಲಭಿಸಿರುತ್ತದೆ. ದೇಶಭಾಂಧವರ ಕ್ಷೇಮಾಭ್ಯುದಯಗಳೇ ನಿಮ್ಮ ಶ್ರಮಕ್ಕೆ ಲಭಿಸತಕ್ಕ ಮುಖ್ಯವಾದ ಫಲ ಪ್ರಜೋಪಯುಕ್ತವಾದ ಕಾರ್ಯಕಲಾಪಗಳನ್ನು ನೆರವೇರಿಸಲು ಸಹಾಯವನ್ನು ಪ್ರತ್ಯರ್ಥಿಸಿ ನೀವುಗಳು ಒಪ್ಪಿಸಿದ ಸಮಸ್ತ ಸಲಹೆಗಳನ್ನೂ ಸಹಾನುಭೂತಿಯಿಂದ ಪರ್ಯಾಲೋಚಿಸುವೆವೆ ನಮ್ಮ ಸರ್ಕಾರದವರ ಕಾರ್ಯನೀತಿಯೂ ಅಂತವನ್ನರಿತು ನಾವು ನಿಮಗೆ ತಿಳಿಸಬೇಕಾದ ಅವಶ್ಯಕತೆಯೇ ಇಲ್ಲ

ನಿಮ್ಮ ಆದರ ಪೂರ್ವಕವಾದ ಸ್ವಾಗತಕ್ಕಾಗಿ ಮತ್ತೊಮ್ಮೆ ನಮ್ಮ ವಂದನೆಗಳನ್ನು ಸಲ್ಲಿಸಿ, ನಿಮ್ಮ ಸಮಸ್ತ ಸ್ವಯತ್ನಗಳೂ ಸಫಲವಾಗಲೆಂದು ಹಾರೈಸುವೆವು ಈ ಊರೂ, ಈ ಡಿಸ್ಟ್ರಿಕ್ಟು ಸಹ ಅತ್ಯಧಿಕವಾಗಿ ಅಭ್ಯುದಯ ಹೊಂದುವಂತೆ ಸರ್ವೇಶ್ವರನಾದ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುವೆವು.

## ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಶಕ್ತಿಯೊಮ್ಮು ಗುರುವರ್ಯರ ಮನೆಗೆ ಹೋಗಿ ಶಿಷ್ಯರ ಮನೆಗಳಿರುತ್ತಿಮ್ಮು, ಆ ಮಹಾವಿಭೂತಿಗಳು ಮಾಡುವರ್ಯೋ ಹತ್ತು ವರ್ಷಗಳಕ್ಕೋ ಒಂದುಸಾರಿ ಹೋಗಿ ಶಿಷ್ಯರ ಮನೆಗಳಿಗೆ ಆಗಮಿಸುವರು ಎಂಬ ಆಸೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳಬೇಕೆ ಇರುತ್ತಿರುವುದಿಲ್ಲ. ಆದರೆ ಇವರು ಹೋಗಿರುವರು ಈ ಆವ್ಯವಸ್ಥೆಯಿಂದ ಅನೇಕ ಮಹತ್ವವಿರುವ ವಿಷಯಗಳನ್ನು ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇವನ್ನು ಮನಗಂಡಾಪುವರ್ಯೋಗ್ಯರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೆವೆ. ಇದರಲ್ಲಿ ಬರೆಯಿಂದ ವಿಷಯಗಳ ಜೊತೆಯು ಚಿತ್ರಾಗಿ ತೊರಿಸಲ್ಪಟ್ಟಿವೆ. ಅದುವರಿಂದ ಸಹಿ ಪುಸ್ತಕ ಮತ್ತು ಶಿಷ್ಯರನ್ನು ಪ್ರತಿಯೊಬ್ಬ ಗುರುವರ್ಯರೂ ತಮ್ಮಲ್ಲಿ ಇಟ್ಟುಕೊಂಡು ಪ್ರಯೋಜನವನ್ನು ಪಡೆಯಬೇಕೆಂದು ವಿನಂತಿಸಿಕೊಳ್ಳುತ್ತೆವೆ. ವಿವರವನ್ನೆಲ್ಲಾ ಬರೆಯಿಂದ ಸಂಚಾರಿಯಾರ್ಯಪ್ರಭಾ ಕಾರ್ಯಾಲಯಕ್ಕೆ ಬರೆಯಿರಿ. ಇದಕ್ಕಾಗಿ ಯಾವುದೂ ಕಿಮೀಷನ್ ಕಾಗದಗಳನ್ನು ಪಬ್ಲೀಷ್‌ಮಾಡಿಸಿಲ್ಲವೆಂದು ಸುಜನರು ಮತ್ತು ಭಕ್ತಾದಿಗಳು ಬೈಯಕ್ಕು ಪಾಡಿಸಿದೆ.

**ಬೆಲೆ ೧ ರೂಪಾಯಿ.**

**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,**

**ಮೈಸೂರು.**

## ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ಪರಿಪಾಲನೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಈ ಸುಲಭಕ್ರಮದಲ್ಲಿ ದೊರೆಯುವವು.

| ಔಷಧಿ ಹೆಸರು | ತೋ | ಮೂಲ್ಯ |
|---|---|---|
| ಸ್ವರ್ಣಮಕರಧ್ವಜ | ೧ | ೫೦—೦—೦ |
| ಸ್ವರ್ಣಚಂದ್ರೋದಯ | ೧ | ೧೦—೦—೦ |
| ,, ತ್ರಿನೇ ನಂಬರ್ | ೧ | ೮—೦—೦ |
| ಮಿಸಿಂಧೂರ | ೧ | ೩—೦—೦ |
| ಸಿಂಧೂರ | ೧ | ೪—೦—೦ |
| ತಾಲಸಿಂಧೂರ | ೧ | ೪—೦—೦ |
| ಲಾಸಿಂಧೂರ | ೧ | ೪—೦—೦ |
| ಸ್ವರ್ಣವಂಗ | ೧ | ೩—೦—೦ |
| ವಂಗ | ೧ | ೧—೦—೦ |
| ಭಸ್ಮಗಳು. | | |
| ಸ್ವರ್ಣಭಸ್ಮ | ೧ | ೪೦—೦—೦ |
| ಮುಕ್ತಭಸ್ಮ | ೧ | ೪—೦—೦ |
| ತಾಮ್ರಭಸ್ಮ | ೧ | ೦—೮—೦ |
| ಲೋಹಭಸ್ಮ | ೧ | ೦—೧೩—೦ |
| ಶಂಗಭಸ್ಮ | ೧ | ೦—೮—೦ |
| ಕಾಗಭಸ್ಮ | ೧ | ೦—೮—೦ |
| ಸಿಕಾಲ್ಸಿಭಸ್ಮ | ೧ | ೦—೮—೦ |
| ಯಂಹಿಭಸ್ಮ | ೧ | ೦—೮—೦ |
| ಸ್ಪಟಿಭಸ್ಮ | ೧ | ೦—೮—೦ |
| ಪಿಂಡೂರಭಸ್ಮ | ೧ | ೦—೮—೦ |
| ಸ್ವರ್ಣಪಕ್ಷಿ ಕೆಂಭಸ್ಮ | ೧ | ೦—೧೩—೦ |
| ಪ್ರವಾಳಭಸ್ಮ | ೧ | ೩—೦—೦ |
| ಮುಕ್ತಾವಳಿಭಸ್ಮ | ೧ | ೪೦—೦—೦ |
| ಪ್ರವಾಲಭಸ್ಮ | ೧ | ೦—೮—೦ |
| ಸ್ಪಟಿಚಿಪ್ಪಿನ ಭಸ್ಮ | ೧ | ೦—೮—೦ |
| ತಾರಂಗದ ಕೇಸೀಡಿನ ಭಸ್ಮ | ೧ | ೦—೮—೦ |
| ಲೋಹಂತಿಕರಕಾಲಭಸ್ಮ | ೧ | ೦—೮—೦ |
| ಸೈಂಧೂರಿ (ನಿನೇ ನಂಬರ್) | ೧ | ೫೦—೦—೦ |
| ಲಾತಿಕ ಸೂರ್ಯಪುಟಿ | ೧ | ೧—೦—೦ |
| ಲಾಜಿತ ಅಗ್ನಿ ಪುಟಿ | ೧ | ೦—೮—೦ |

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲು ಮೊದಲಾದ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರರು,

**ಆಯುರ್ವೇದಔಷಧಾಲಯಪರೀಕ್ಷಾಲಾ,**

ಪೋಸ್ಟ್, ಹಿಲಿಮಠ, ಜಿಲ್ಲಾ ಗಢವಾಲ್ ಯು. ಪಿ.


# ವೈದಿಕ ಶಿವಪೂಜಾವಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿದೆ; ಆದರೆ ಮುದ್ರಾಕ್ಷರಗಳಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅಕ್ಷಂತ. ವ್ಯಕ್ಷಪಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಹೀನವಾಗಿ ಉಚ್ಚರಿಸಕಾರದಷ್ಟೆ ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ನಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಸಿದ್ಧಾಂತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನೂ ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವನ್ನು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಕ್ಷರದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರ ನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖನಾಮಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿಹೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲಾಗಿರುವಂತೆ ಶಿವಪೂಜೆಯನ್ನೆಸಗಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧೫ ಆಣೆ. ವಿ ಪಿ ಚಾರ್ಜ್ ಪ್ರತ್ಯೇಕ.

ಮ್ಯಾನೇಜರ್,

**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

# ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲಿಲ್ಲ ಶಿಖಾರತ್ನವೆಂದೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾತ್ಯೀರದೇಶದ ಸ್ವಸ್ಪ್ರಚಾರನಂದ ಶಿವತಾಚಾರ್ಯರೆಂಬ ಪ್ರಾಜ್ಞೇನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗನುವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಶಾಖೆವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡಿ ಅನಾಧ್ಯವಾಗುತ್ತಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾತೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಕಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಾಂದ ಕಂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೫೦೦ ಪುಟಗಳತ್ತಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು. ಪಂಟಾಪೋಷಕರಾಗಿದೆ ಸಮ್ಮನ್ನಾರುವ ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಈ ಗ್ರಂಥದ ಯೋಗ್ಯತೆಯನ್ನು ಕಂಡು. ತಮ್ಮ ತೆಯಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿರೋಪಿಸುವ್ರವಕ್ಕೋಸ್ಕರ ರಹಸ್ಯ ಧನ್ಯವಾದ ಚಾವಚಿತ್ರವನ್ನು ಸಹಿ ದಯವಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳುಸಿಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೫೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಸವಿಸ್ತರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುದ್ದಿಸಕಡೆಗೆ ದೃಷ್ಟಿಯಿಸ್ಸಿಡೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ ಒಂದು-ರೂಪಾಯಿಗೆ ನಾಕ್ಕಾಣೆಯಂತೆ ತಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು ವಿ ಪಿ ಚಾರ್ಜ್ ೧೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್.—

**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

## ಮನೋಹರವಾದ ಫೋಟೋಗಳು.

ಶ್ರೀ ಶಂಖಾಚಾರ್ಯರು ಮೊದಲಾದವುಗಳನ್ನು ಕೂಡಿಸಿ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು, ಲೋಕಪ್ರಸಿದ್ಧರಾದ ಅಗಸ್ತ್ಯ, ದಧೀಚಿ, ವ್ಯಾಸ, ಶಾನಂಪ, ಮೊದಲಾದ ಮಹರ್ಷಿಗಳಿಗೆ ವಿಶೇಷವಾಗಿ ಉಪದೇಶಿಸಿದ ಫೋಟೋ ಸೈಜು ೧೦×೧೪ ಬೆಲೆ . ೦—೧—೬

ಸದ್ಭಕ್ತ ಶಿವಯೋಗಿಶಾಸನಾಧಿಕಾರಿಯಾದ ಇವರು ಅಜಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ ೦—೧—೬

ಶ್ರೀ ಜಗದ್ಗುರು ಸೂರ್ಯನಾರಾಯಣ ಲಿಂಗವಜಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ .... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗವಜಾರದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ . ೦—೨—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ .. ೦—೦—೯

ಶ್ರೀ ರೇಣುಕಾಚಾರ್ಯರು ಮತ್ತೆ ಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .. ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ವ್ಯಾಥಾನುಸಾರವಾಗಿ ಸಿಕಲಲಿಂಗಿಯೇ ಮೂರುಕೋಟಿ ಗುರುದೊಷವನ್ನು ಧಾರಣಮಾಡಿ ಮಾರುತೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ . ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಕಂಠಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ .... ೦—೦—೯

ಶ್ರೀಶೈಲಶ್ರೀತ್ರಿವಿಧಾಜಗುರು ಶ್ರೀ ಜಗದ್ಗುರು ನಿಸ್ಪೃಹಶ್ರೀ ಮೂರಭಮೌನೀಶ್ವರ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ . ೦—೦—೯

ಶ್ರೀಮಮಜ್ಞಯೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಿ.ಚಾರ್ಯರ ಫೋಟೋ .... ೦—೦—೯

ಶ್ರೀಮದ್ರಾಜಭಾಭೀಷ ವೀರಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .. ೦—೦—೯

ಶ್ರೀಮನ್ಮಜ್ಞಯೀ ಜಗದ್ಗುರುಗಳವರ ಸ್ಮಾರಕದ ಸ್ಥಾಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಹಂಚಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ ... ೦—೦—೯

ಶ್ರೀ ಜಗದ್ಗುರು ಉಜ್ಜಯಿನಿ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಿ.ಚಾರ್ಯರ ಫೋಟೋ .

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾಯ ಪ್ರಸೀದಂತು || REGISTERED No. M. 2266

# ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಸಂಚಾಸ್ಯಾವಪಂಕಜಾತಜನಿತರ ಪಂಚಾಸ್ಯಸೀರಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೀಶ್ವರರ್ ॥
ಪಂಚಾಚಾರನಿಯಾಪಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚ್ಯಾಧ್ಯಜಗದ್ಗುರೂತ್ತಮವರ್ಯಾಲಿಲ್ಸ್ಯುರೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾ ವೇ॥ ಏರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೭ನೇ ಆಗಸ್ಟ್ ೧೯೩೯ [ಸಂಚಿಕೆ ೧೫

## ರೇಣುಕವಿಜಯಮಹಾಪುರಾಣ.

ಯಾವ ಮಹಾತ್ಮನು ಈ ಭೂಮಂಡಲವಲ್ಲಿ ಸೋಮೇಶ್ವರಲಿಂಗಮುಖದಿಂದವತರಿಸಿ ತನ್ನ ನವ ಹಿಮಾ ಪ್ರಭಾವದಿಂದ ಸಮಸ್ತ ಮಾನವಕೋಟಿಯನ್ನು ದ್ಧರಿಸಿದನೋ, ಆ ಗುರುಸಾರ್ವಭೌಮ ಶ್ರೀಜಗದ್ಗುರು ರೇಣುಕಾಚಾರ್ಯನ ಪವಿತ್ರಚರಿತ್ರವನ್ನು ಶ್ರವಣಮಾಡುವುದು ಪ್ರತಿಯೊಬ್ಬ ಗುರುಭಕ್ತರ ಆದ್ಯಕರ್ತವ್ಯವಾಗಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಭಕ್ತಮಾಹೇಶ್ವರರೂ ಆ ಮಹಿಮನ ಪುರಾಣವನ್ನು ತರಿಸಿಕೊಂಡು ಪುರಾತನ ಪದ್ಧತಿಯಂತೆ ಶಾಸ್ತ್ರಶ್ರವಣಮಾಸದಲ್ಲಿ ಪ್ರಮಥಪುಂಗವನ ಸಚ್ಚರಿತ್ರವನ್ನು ಕೇಳಿ ತನ್ನೂ ಗ್ರಾಮವನ್ನೂ ತಮ್ಮ ವಂಶವನ್ನೂ ಪಾವನಗೊಳಿಸಿಕೊಳ್ಳಬೇಕೆಂದು ಕೋರಿಕೆ.

ಬೆಲೆ ೧ ರೂ.

ಮ್ಯಾನೇಜರ್,
ಶ್ರೀಸಂಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ ॥

**ಶ್ರೀಜಗದ್ಗುರು ಪಂಚಾಚಾರ್ಯ, ಸಂಸ್ಕೃತ, ವೈದಿಕ, ಜ್ಯೋತಿಷ ಪಾಠಶಾಲಾ ಬಣ್ಣದಮಠ, ಹಾವೇರಿ.**

ಸಂಸ್ಕೃತಾಭ್ಯಾಸ ಮಾಡಹತ್ಕ ವಿದ್ಯಾರ್ಥಿಗಳಿಗೆ ತು ಜಾಹೀರ ಮೂಲಕ ತಿಳಿಸುವುದೇನೆಂದರೆ:—

ಸದ್ಯ ನಮ್ಮ ಸಂಸ್ಥೆಯಲ್ಲಿ ೨೦ ಜನ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು, ಪುನಃ ೫ ಜನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ನಿರ್ಧರಿಸಿದೆ. ಅಭ್ಯಾಸ ಮಾಡಲಿಚ್ಛಿಸುವರು ಈ ಆಗಸ್ಟ ತಿಂಗಳೊಳಗಾಗಿ ಸದರಿ ಸಂಸ್ಥೆಯ ಅಧ್ಯಕ್ಷರ ಹೆಸರಿಗೆ ಅರ್ಜಿ ಮೂಲಕ ವಿನಂತಿಮಾಡಿಕೊಳ್ಳತಕ್ಕದ್ದು. ಸಮಯಮೀರಿ ಬಂದ ಅರ್ಜಿಗಳಿಗೆ ಗಮನ ಕೊಡುವದಿಲ್ಲ.

ಈ ಪಾಠಶಾಲೆಯಲ್ಲಿ ಲೋಕಲ್ ಇಂಗ್ಲೀಷ್ ಸ್ಕೂಲು ಗಳಲ್ಲಿ ಅಭ್ಯಾಸಮಾಡತಕ್ಕ ವಿದ್ಯಾರ್ಥಿಗಳ ಸಂಸ್ಕೃತ ಶಿಕ್ಷಣಕ್ಕೂ ಹಾಗೂ ಪ್ರತ್ಯೇಕವಾದ ಹಿಂದಿ ಕ್ಲಾಸಿಗೂ ವಿರ್ಪಾಡಿಸಿದೆ ಈ ಹಿಂದೆ ಇದ ನೇ॥ ಪಂ॥ ವಿರೂಪಾಕ್ಷ ಶಾಸ್ತ್ರಿಗಳು, ನಾವರವಾಡ. ಇವರು ತಮ್ಮ ಗೃಹಕೃತ್ಯದ ಆಡಚಣೆಯ ಮೂಲಕ ರಾಜೀನಾಮೆಯನ್ನು ಕೊಟ್ಟಿದ್ದರಿಂದ ವೇ॥ ಪಂ॥ ಇಂದುಧರಶಾಸ್ತ್ರಿಗಳು ಸಾತೇನಹಳ್ಳಿ ಇವರನ್ನು ಅಧ್ಯಾಪಕರನ್ನಾಗಿ ನಿಯಮಿಸಿದೆ. ಸಾಹಿತ್ಯ, ವೇದಾಂತ, ದರ್ಶನ ಪರೀಕ್ಷೆಗಳ ಅಭ್ಯಾಸ ಮಾಡತಕ್ಕ ವರು ತೀವ್ರ ಅರ್ಜಿಮೂಲಕ ಬರೆದುಕೊಳ್ಳತಕ್ಕದ್ದು.

ಶ್ರೀ. ಜ. ಪಂ. ಸಂ. ವೈ. ಜ್ಯೋ. ಪಾಠಶಾಲಾ
ಸೆಕ್ರೆಟರಿ, ಮೊ. ಪಿ. ಭಕ್ತಜ.
ಹಾವೇರಿ.

### ರೇಡಿಯಮ್ಮಿಗಿಂತ ಹೆಚ್ಚು ಸಹಕಾರಿ ಲೋಹ ಸಿಕ್ಕಿದೆ

ಈಗ ಪ್ರಪಂಚದಲ್ಲಿ ಸಿಕ್ಕಿರುವ ಎಲ್ಲ ಪದಾರ್ಥಗಳ ಗಿಂತ ರೇಡಿಯಮ್ಮಿಗೆ ಬಹಳ ದೆಲೆ ಬೆಲೆ ಕೊಟ್ಟರೂ ಪದಾರ್ಥ ಸಿಕ್ಕುವದಿಲ್ಲ. ಇದು ಸ್ವಯಂಪ್ರಕಾಶವುಳ್ಳದಾ ಗಿದ್ದು ಅನೇಕ ರೋಗಗಳನ್ನು ಗುಣಪಡಿಸಲೂ ಸಹ ಬರುತ್ತದೆ. ಈಗ ಕ್ಯಾಲಿಫೋರ್ನಿಯದ ಪ್ರೊಫೆಸರ ಇ. ಓ. ಲಾರೆನ್ಸ್ ಎಂಬುವರು "ರೇಡಿಯಂ ಸೋಡಿಯೋ" ಎಂಬ ಒಂದು ಹೊಸ ಪದಾರ್ಥವನ್ನು ಶೋಧ ಮಾಡಿದ್ದಾರೆ. ಇದು ರೇಡಿಯಮ್ಮಿಗಿಂತ ಎರಡರಷ್ಟು ಶಕ್ತಿಯುಳ್ಳದ್ದಾಗಿರುವದಲ್ಲದೆ ಸುಲಭ ಬೆಲೆಗೂ ದೊರೆಯುವದೆಂತೆ! ಇದರ ಗುಣ ಪರೀಕ್ಷೆ ನಡೆಯುತ್ತಿದೆ.

### ಬರ್ಲಿನ್ ನಗರದಲ್ಲಿ ವಿಮಾನದಾಳಿ ರಕ್ಷಣಾವ್ಯವಸ್ಥೆ

ಶತ್ರುಗಳ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳುವ ರಕ್ಷಿಪಡೆಯು ಬರ್ಲಿನ್ನಿನಲ್ಲಿ ಸುರಕ್ಷಿತವಾದ ನಗರವು ಪ್ರಪಂಚದಲ್ಲಿ ಬೇರೊಂದಿಲ್ಲವೆಂದು ಬರ್ಲಿನ್ ನಗರದ ವೈಮಾನಿಕ ರಕ್ಷಣ ವ್ಯವಸ್ಥೆಯ ಮುಖ್ಯಾಧಿಕಾರಿಗಳಾದ ಜನರಲ್ ಹಾಫ್‌ಮನ್‌ರವರು ಕಳೆದ ವಾರ ಪ್ರಯೋಗಗಳನ್ನು ನಡೆಯಿಸಿ ತೋರಿಸಿದರು. ಶತ್ರುವಿಮಾನಗಳು ಬರ್ಲಿನ್ನಿನ ಕಡೆ ಬರುತ್ತಿದ್ದರೆ ನೂರಾರು ಮೈಲಿಗಳ ದೂರದಿಂದಲೇ ಅವು ಬರುವ ವಿಷಯವು ಗೊತ್ತಾಗು ವದು. ಇದರಿಂದ ಅವುಗಳನ್ನು ತಡೆಗಟ್ಟಲು ಹೋಗುವ ವಿಮಾನಗಳಿಗೆ ಸಾಕಷ್ಟು ಅವಕಾಶವು ದೊರೆಯುವದು. ಇದರಿಂದ ಅವುಗಳು ನಗರದ ಸಮೀಪಕ್ಕೆ ಬರದಂತೆ ತಡೆಗಟ್ಟಬಲ್ಲುಕೂಲ. ಹಾಗೂ ಅವು ಸಮೀಪಿಸಿದವೆಂದರೆ, ಬರ್ಲಿನ್ನಿನ ಅಂಟಿ ವಿರ್‌ಕ್ರಾಫ್ಟ್ ಬಂದೂಕಗಳು ತಮ್ಮ ಶಕ್ತಿಯನ್ನು ಪ್ರದರ್ಶಿಸುವವು. ಕಳೆದ ವಾರ ನಡೆದ ಈ ವಿಧ ಪರೀಕ್ಷೆಗಳನ್ನು ನೋಡಿದರೆ ಬರ್ಲಿನ್ನಿಗೆ ಯಾವ ಶತ್ರುವೂ ನುಗ್ಗಿಬರುವಂತಿಲ್ಲವೆಂದು ತಿಳಿದುಬರುವದು.

### ಸಜೀವವಾದ ಶಂಖ!

'ತಿರುಕಲುಕುಂದಂ' ಎಂಬುದು ದಕ್ಷಿಣ ಹಿಂದುಸ್ಥಾನದಲ್ಲಿ ಒಳ್ಳೆ ಪ್ರಸಿದ್ಧವಾದ ಯಾತ್ರಾಸ್ಥಳ. ಇಲ್ಲಿ ಶ್ರೀ ತ್ರಿಪುರಸುಂದರಿಯ ಪುರಾತನ ದೇವಾಲಯವಿದೆ. ದಕ್ಷಿಣ ಹಿಂದುಸ್ಥಾನದ ದೇವಾಲಯಗಳಲ್ಲೆಲ್ಲಾ ಸರ್ವಸಾಮಾನ್ಯವಾಗಿರುವಂತೆ ಈ ದೇವಾಲಯದ ಸಮೀಪವಲ್ಲೂ 'ರಂಕತೀರ್ಥ' ವೆಂಬ ಒಂದು ದೊಡ್ಡ ತೀರ್ಥವಿದೆ. ಈ ಕೊಳವು ಬಹಳ ಪುರಾತನವಾದುದು.

ಇಲ್ಲಿಯ ಸ್ಥಳಪುರಾಣವು ಈ ರೀತಿಯಾಗಿದೆ. ಒಂದಾ ನೊಂದು ಕಾಲವಲ್ಲಿ, ಪುರಾಣಪ್ರಸಿದ್ಧರಾದ ಮಾರ್ಕಂಡೇಯ ಮಹರ್ಷಿಗಳು ಈ ಕೊಳದ ದಂಡೆಯ ಮೇಲೆ ಪೂಜಾದಿ ನಿತ್ಯಕರ್ಮಗಳನ್ನು ನೆರವೇರಿಸುತ್ತಿರುವಾಗ ಅಭಿಷೇಕಕ್ಕೆ ಅವಶ್ಯಕವಾದ ಶಂಖವಿಲ್ಲದೆ ವಿಷ್ಣುವೆಂಟಾಯಿತು. ಮಾರ್ಕಂಡೇಯ ಮಹರ್ಷಿಗಳು ಮುಂದೇನು ಮಾಡಬೇಕೆಂದು ಯೋಚಿಸುವಷ್ಟರಲ್ಲಿ ಕೊಳದಲ್ಲಿ 'ಗುಳು ಗುಳ' ಶಬ್ದವಾಯಿತು. ಅದೇನು ಶಬ್ದವೆಂದು ನೋಡುವಲ್ಲಿ, ನೀರಿನಲ್ಲಿ ನೊರೆಯು ಕಾಣಿಸಿಕೊಂಡು, ಸ್ವಲ್ಪ ಹೊತ್ತಿನಲ್ಲಿಯೇ ಒಂದು ಶಂಖವು ತಮ್ಮ ಕಡೆಗೆ ತೇಲಿ ಬರುವುದನ್ನು ಕಂಡರು. ಮಹರ್ಷಿಗಳು ಅತ್ಯಂತ ಸಂತೋಷದಿಂದ ಅದನ್ನು ತೆಗೆದುಕೊಂಡು ಪೂಜಾದಿಗಳನ್ನು ನೆರವೇರಿಸಿದರು. ಅಂದಿನಿಂದ ಆ ಕೊಳಕ್ಕೆ 'ಶಂಖತೀರ್ಥ' ವೆಂದೂ, ಮಾರ್ಕಂಡೇಯ ಮಹರ್ಷಿಗಳು ಪೂಜೆಮಾಡಿದ ದಂಡೆಗೆ 'ಮಾರ್ಕಂಡೇಯ ಶಾಜ್ಞ' ಎಂದೂ ಹೆಸರು ಬಂದಿತು. ಹಾಗೂ ಅಂದಿನಿಂದ ಇಂದಿನ ವರೆಗೂ ಹನ್ನೆರಡು ವರ್ಷಗಳಿಗೊಮ್ಮೆಯಾದರೆ ಆ ತೀರ್ಥದಿಂದ ಒಂದು ಶಂಖವು ತೇಲಿಕೊಂಡು, ಮಾರ್ಕಂಡೇಯ ಶಾಖೆಗೆ ಬರುವುದಂತೆ! ಇದೇ ಜೂ ೨೬ನೇ ತಾರೀಖಿನ ದಿವಸ ಮೇಲೆ ಹೇಳಿದಂತೆ ನೀರಿನಿಂದ ಸಜೀವವಾದ ಶಂಖವೊಂದು ತೇಲಿಕೊಂಡು ಬಂದು ಅದೇ ಮಾರ್ಕಂಡೇಯ ಶಾಖೆಗೆ ಮೆಟ್ಟಿಲನ್ನೇ ಏರಿ ಬಂದಿತು. ಅಸ್ಥಳದಲ್ಲಿ ಆಲ್ಲಿ ಸ್ನಾನಮಾಡುತ್ತಿದ್ದವರು ಅದನ್ನು ನೋಡಿ, ಭಯಭಕ್ತಿ ಯಿಂದ ಅದರ ಸುತ್ತಲೂ ಗುಂಪು ಕೂಡಿದರು. ವರ್ಷ ಮಾನವು ಕೂಡಲೇ ಎಲ್ಲ ಕಡೆಗಳಿಗೂ ಸುದ್ದಿತು. ಆ 'ಪವಿತ್ರ ಶಂಖ' ಕ್ಕೆ ನಡೆಯುವ ಪೂಜಾದಿ ಉತ್ಸವಗಳನ್ನು ನೋಡುವದಕ್ಕಾಗಿ ಸಾವಿರಾರು ಜನರು ದೂರದ ಗ್ರಾಮಗಳಿಂದ ಆಗಮಿಸಿದರು.

ಅರ್ಚಕರು ಶಂಖವನ್ನು ದೇವಾಲಯಕ್ಕೆ ತೆಗೆದು ಕೊಂಡು ಹೋಗಿ ಅಭಿಷೇಕಾದಿ ಕರ್ಮಗಳನ್ನು ನೆರವೇರಿಸಿದನಂತರ, ಅದನ್ನು ಪಲ್ಲಕ್ಕಿಯಲ್ಲಿಟ್ಟು ಊರಿನಲ್ಲೆಲ್ಲಾ ಉತ್ಸವಮಾಡಿದರು. ಅನಂತರ ಅದನ್ನು ಶ್ರೀ ತ್ರಿಪುರ ಸುಂದರಿ ದೇವಾಲಯದಲ್ಲಿ ಜೋಪಾನವಾಗಿ ಇರಿಸಲಾಯಿತು.

॥ ಶ್ರೀಜಗದ್ಗುರು ದಾರುಕಾಚಾರ್ಯಾಯ ನಮಃ ॥

## ಪೂರ್ವಾಚಾರ್ಯರು ಆಶ್ರಮಗಳನ್ನೇಕೆ ಏರ್ಪಡಿಸಿದರು?

(ಲೇ—ಆರ್. ಎಂ ಮಲ್ಲಿಕಾರ್ಜುನಾಚಾರ್ಯ, ತಿಪ್ಪೂರ್)

ಈ ಆರ್ಯಾವರ್ತದಲ್ಲಿ ನಮ್ಮ ಪೂರ್ವಾಚಾರ್ಯರು ಮಾನವನ ಉದ್ಧಾರಕ್ಕೋಸ್ಕರ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಗಳೆಂಬ ನಾಲ್ಕು ಆಶ್ರಮಗಳನ್ನು ಏರ್ಪಡಿಸಿರುವುದು ಸರಿಯಷ್ಟೆ! ಹೀಗೆ ಏರ್ಪಡಿಸಿದುದರ ಉದ್ದೇಶವೇನೆಂಬುದನ್ನು ತಿಳಿಯುವಬಾವ ಶ್ಯಕವಾಗಿರುವುದು. ಈ ಆಶ್ರಮಗಳು ಪುಕ್ಕಟ್ಟೆಯಾಗಿ ಮಂದಿರಕ್ಕೆ ಸೋವಾಸಾಗಗಳಾಗಿರುವವು ಇವುಗಳು ಧನಕನಕಾದಿ ಜಡ ವಸ್ತುಗಳಂತೆ ಒಬ್ಬರಿಂದೊಬ್ಬರಿಗೆ ಕೊಡತಕ್ಕುವುಗಳಾಗಿಲ್ಲವು ಅವು ಸ್ವತಃ ಅವನವನ ಪ್ರಯತ್ನಂದಿರದಲ್ಲಿ ಮೂಡಬೇಕು ಈ ಸದುದ್ದೇಶಗಳನ್ನು ಸರಿಯೀಯೇ ನಮ್ಮ ಆರ್ಯರುಏರ್ಪಡಿಸಿರುವ ಪದ್ಧತಿಗಳಿಲ್ಲವೂ ಕ್ರಮಬದ್ಧವಾಗಿರುವವು ಆರ್ಯಧರ್ಮವನ್ನು ಸಾಧ್ಯಂತವಾಗಿ ವಿಚಾರಮಾಡಿದವರಿಗೆ ಈ ವಿಷಯವು ಗೊತ್ತಾಗುವುದು ಅವರು ವಿಚಾರಿಸಿದಲ್ಲವೂ ಒಂದು ಕ್ರಮವನ್ನನುಸರಿಸಿರುವಲ್ಲದೆ, ಆವುಗಳಲ್ಲಿ ಪರಿಪೂರ್ಣದೆಕ್ಕೂ ಕಾಲಕ್ಕೆ ತಕ್ಕ ಫಲವೂ, ಅವಸ್ಥೆಗೆ ತಕ್ಕಹಾಗೆ ವಿಧವಿಧವಾದ ಕರ್ತವ್ಯಗಳೂ ಇರುವುವು ಚಿರಂತರ ಶ್ರೇಯಸ್ಕರವಾದ ಸಿದ್ಧಾಂತವಿಷ್ಟೇ ಯಾವರೀತಿಯಲ್ಲಿ ಒಂದು ಕ್ರಮವನ್ನನುಸರಿಸಿರುವೆಯೋ, ಕರ್ತೃತ್ವ ಆರ್ಥ ಧರ್ಮವೂ ಸಹ ಒಂದು ಕ್ರಮವನ್ನನುಸರಿಸಿದೆ ಅವ. ಹೇಗೆಂದರೆ —ಭೂಮಿಯಲ್ಲಿ ಮೊದಲು ಬೀಜವನ್ನು ಬಿತ್ತಿದರೆ ಅನಂತರ ಅದು ಗಿಡವಾಗಿ ಬೆಳೆದು, ಅದಾದ ಮೇಲೆ ಅದರಲ್ಲಿ ಫಲವಾಗಿ ಪದು, ಫಲವಾದ ನಂತರ ಅದನ್ನು ಕೊಯ್ದು ಸಂಗ್ರಹಿಸಿ, ತದನಂತರ ಸಂಗ್ರಹಿಸಿದುದನ್ನು ಬೀಸಿ ಹಿಟ್ಟುಮಾಡಿ, ಆ ಹಿಟ್ಟಿನಿಂದ ರೊಟ್ಟಿಯನ್ನು ಮಾಡಬಹುದು ಬೀಜವು ರೊಟ್ಟಿಯಾಗಿ ಪರಿಣಮಿಸುವವರೆಗೂ ಹೇಗೆ ಕ್ರಮವನ್ನು ಬಿಡದೆ ಅನುಸರಿಸಿಕೊಂಡು ಬಂದಿರುವದೋ ಹಾಗೆಯೆ ಆಚಾರವ್ಯವಹಾರಗಳೂ ಧರ್ಮವಿಧಾನಗಳೂ ಕ್ರಮವನ್ನನುಸರಿಸುವಂತೆ ಅವುಗಳನ್ನು ಆಚಾರ್ಯ ಗುರುಪುಂಗವರು ಈ ಪುಣ್ಯಭೂಮಿಯಲ್ಲಿ ಏರ್ಪಡಿಸಿ ತನ್ಮೂಲಕ ಮಾನವನ ಜೀವಿತಕಾಲ ಪರಿಮಾಣಂತೆ ಮಾಡಿರುವರು ಈ ವಿಷಯಕ್ಕಿನಲ್ಲಿ ಮಾನವನಿಗೆ ಬರುವ ಅವಸ್ಥಾಂತರಗಳು ಕ್ರಮವಿಡಿದು ಒಂದರ ಕೆರುಮಾಲು ಒಂದು ಯಹೋಚಿತವಾಗಿ ಬರುತ್ತಲಿರುವವು ಈ ಮೇಲಿನ ವಿಮರ್ಸೆಯಲ್ಲಿ ಬೀಜ ಹಿಟ್ಟುಎರೆಯುವುದು ಬ್ರಹ್ಮಚರ್ಯ (ವಿದ್ಯಾರ್ಥಿದಶೆ) ನೆಲ ಸುಪ್ಪತ್ತಿದಲ್ಲಿ ಸುಜ್ಞಾನವೆಂಬ ಬೀಜವನ್ನು ಊರತಕ್ಕದ್ದಾಗಿರುವುದು, ಬೀಜವು ಬೆಳೆದು ಅಂಕುರಿಸಿ ಗಿಡವಾಗಿ ಅದರಲ್ಲಿ ಫಲ ಬಿಡುವದೆಂಬುದೇ ಗೃಹಸ್ಥ, ದಶೆಯೆನಿಸಿಕೊಳ್ಳುವುದು ಫಲವನ್ನು ಕೊಯ್ದು ಸಂಗ್ರಹಿಸುವದೆಂಬುವದೇ ಪ್ರಪಂಚ ವ್ಯವಹಾರದಿಂದ ಪರಾಙ್ಮುಖವಾಗುವ ವಾನಪ್ರಸ್ಥ ದಶೆಯೆನಿಸಿಕೊಳ್ಳುವದು ಸಂಗ್ರಹಿಸುವದೆಲ್ಲವು ಬೀಸಿ ಹಿಟ್ಟುಮಾಡಿ ಮಾನವರು ತನ್ನನ್ನವದಕ್ಕೋಸ್ಕರ ರೊಟ್ಟಿಯನ್ನು ಮಾಡುವದೆಂಬುದೇ ಸಂಪೂರ್ಣ ಸ್ವಾರ್ಥ ತ್ಯಾಗಮಾಡಿ ಲೋಕಸಂಗ್ರಹಾರ್ಥವಾಗಿ ಕಾರ್ಯವಾಗುತ್ತ ಸತ್ಯಸ್ವಾವಸ್ಥೆಯೆನಿಸಿಕೊಳ್ಳುವುದು ವಾಸ್ತವಾಂಶವು ಹೀಗಿರುವುದರಿಂದ ಸಮಸ್ತರೂ ಸರಿಯಾದ ಕ್ರಮವನ್ನನುಸರಿಸಿ ಪ್ರವಾಹದಂತೆ ಮುಂದು ಮುಂದಕ್ಕೆ ನುಗ್ಗಿ ಮೇಲಕ್ಕೆ ಹತ್ತಲೇ ಬೇಕು ಅದನ್ನು ಅನುಸರಿಸುವುದರಲ್ಲಿ ನೈತ್ಯಸ್ವವಾಗದಂತೆ ಜಾಗರೂಕತೆಯಿಂದ ನೋಡಿಕೊಳ್ಳಬೇಕು ಈ ಕ್ರಮವನ್ನು ಸ್ವರಹಿಸುವುದರ ಜೊತೆಗಾಗಿಯೇ ಆಶ್ರಮಗಳನ್ನು ಏರ್ಪಡಿಸಿದ್ದಾರೆ ಆಚಾರ್ಯರು ಮಾಡಿರುವ ಏರ್ಪಾಡನ್ನು ಅನುಸರಿಸಿ ನಡೆಯುತ್ತಾ ಬಂದರೆ ಮನುಷ್ಯನಿಗೆ ಬರುವ ಒಂದೊಂದು ಅವಸ್ಥೆಯಿಂದಲೂ ಬರಬೇಕಾದ ಅತ್ಯುತ್ತಮ ಫಲವು ಬಂಡೀಬರುವುದು. ಅಭಿಪ್ರಾಯವಾದ ವೀಗೀಗೆ ಆಚಕಾರವೂ ಹೊರಯುವುದು ಸಾರಾಸಾರ ವಿಚಾರಮಾಡಿ ನೋಡಿದಲ್ಲಿ ಈ ಕಾಲ್ಕು ಆಶ್ರಮಗಳೂ ಮಾನವನ ಆಭ್ಯುದಯಕ್ಕಾಗಿಯೇ ದೈವನಿರ್ಮಾಣವಾಗಿರುವ ಕ್ರಮವೆಂದು ಮನವರಿಕೆಯಾಗದಿರದು. ಆದರೆ, ಯಾರು ಈ ಆಶ್ರಮ ನಿಬಂಧನೆಗಳನ್ನು ಮೀರಿ ನಡೆಯುವರೋ ಅವರು ಪ್ರಕೃಂಜದ ಸ್ವಭಾವ ವಿಧಿಗಳನ್ನು ತಿಳಿಯದ ಮೂಢನು ಹುಟ್ಟುಗಳಲ್ಲದ ದೋಣಿಯಲ್ಲಿ ಕುಳಿತುಕೊಂಡು ಪ್ರವಾಹವನ್ನು ದಾಟಲು ಹೊರಟಂತಾಗುವದು ಆದುದರಿಂದಲೆ ಶ್ರೀ ನಿಜಗುಣ ಯೋಗಿಗಳು "ಕ್ರಮ ತಪ್ಪಿ ನಡೆಯುವುದರಿಂ ಬಂಧನ ಮಂಟೆ" ಎಂದು ಅಪ್ಪಣೆ ಕೊಡಿಸಿರುವರು ಆದ ಪ್ರಯುಕ್ತ ಪೂರ್ವಾಚಾರ್ಯರು ಏರ್ಪಡಿಸಿರುವ ನಿಬಂಧನೆಗಳನ್ನನುಸರಿಸಿ ನಡೆದುಕೊಂಡು ಜನನ ಮರಣಾತ್ಮಕವಾದ ಸಂಸಾರ ಪ್ರವಾಹದ ಸುಳಿಯಿಂದ ಬಿಡುಗಡೆ ಹೊಂದಿ ಆತ್ಮೋದ್ಧಾರ ಮಾಡಿಕೊಳ್ಳುವದು ಮಾನವನ ಕರ್ತವ್ಯ ಕರ್ಮವಾಗಿರುವದು

## ಗೋಮಹಿಮಾ ನಿರೂಪಣೆ.

(ಲೇ—ಶಿವಪ್ಪಶಿನಿ ಅಪ್ಪಾಸ ನಿರ್ಮಾ ಅನವಟ್ಟಿ ರಾಮರಾಯರು)

ಈ ಪ್ರಪಂಚವು ವೇದವಿದರಾದ ವಿಬುಧರಿಂದಲೂ, ಅವ್ಯತವನ್ನು ಕೊಡುವ ಗೋವುಗಳಿಂದಲೂ, ಭಗವಂತನಿಂದ ದತ್ತನಾದ ವೇದಮಾರ್ಗಾನುಸಾರ ನಡೆವವರಿಂದಲೂ, ಸಚಿವ್ಯಕಾಲದೋಷಗಳಿಂದಲೂ, ದಾತ್ಯಗಳಿಂದಲೂ ನಡೆಯುತ್ತಿರುವುದೆಂದು ಶಾಸ್ತ್ರವು ನಿರೂಪಿಸುವುದು ಅಲ್ಲದೆ ಸರಮಾತ್ಮನು ತಾನು ಸೃಷ್ಟಿಸಿರುವ ಈ ಪ್ರಕೃಂಜದಲ್ಲಿರುವ ಸಮಸ್ತ ಜೀವಿಗಳಲ್ಲಿಯೂ ಕಾಣಿರುತ್ತಾ ಜೀವನಿಗೆ ಪ್ರೇರಕನಾಗಿಯೂ ಇರುವುದರಿಂದ ಜೀವನ ಕರ್ಮಾಂತೆ ಒಬ್ಬನಿಂದ ಮತ್ತೊಬ್ಬನಿಗೆ ಸಹಾಯವುಂಟಾಗುತ್ತಾ ಮತ್ತೊಂದುವೆಳೆ ಮತ್ತೊಬ್ಬರಿಗೆ ಕೆಡಕುಂಟಾಗುತ್ತಾ ಇರುವುದು ಗೋವಾದರೋ, ಈಶ್ವರನಿಂದ ಸೃಷ್ಟಿಯಾಗಿ ಈ ಲೋಕದಲ್ಲಿರುವ ಜೀವಿಗಳಿಗೆ ಅಧಿಕಾರಾಗಿರುವುದಲ್ಲದೆ ಅದರಿಂದಲೇ ಸಕಲರೂ ಜೀವಿಸಿಕೊಂಡಿರುವುದೆಲ್ಲ ಮುಖ್ಯ ಆಧಾರವಾಗಿರುವುದೆಂಬುದು ಸಕಲರಿಗೂ ವೇದ್ಯವಾಗಿದೆ

ಲೋಕದಲ್ಲಿ ನವ-ಸುತ್ತಿರುವ ಬಾಲಕರೇನು, ವೃದ್ಧರೇನು, ರೋಗಿಗಳೇನು ಇವರೆಲ್ಲರೂ ಕಾಲೋಚಿತವಾಗಿ ಗೋವಿನ ಹಾಲನ್ನು ಬಿಡದೆ ಸೇವಿಸುತ್ತಾ ಬಳೆಯುತ್ತಾ ರೋಗನಿವಾರಣೆಯನ್ನು ಮಾಡಿಕೊಳ್ಳುತ್ತಾ, ಶಕ್ತಿಯನ್ನು ಸಡೆಯುತ್ತಾ ವಿರಾಜಿಸುತ್ತಾ ಇರುವರಲ್ಲದೆ, ಹವ್ಯಕವ್ಯಗಳ ಮೂಲಕ ಮಾನವರು ಶಾಸ್ತ್ರೋಧಾರದ ಮೇಲೆ ಕೊಡುವ ಹಾಲಿನಿಂದ ದೇವತೆಗಳು ಸಂತೋಷ ಹೊಂದಿ ಲೋಕವು ವೃದ್ಧಿ ಹೊಂದುತ್ತಿರುವುದು, ಎಂದು ಹೇಳುವುದು ಶಾಸ್ತ್ರದ ಮಾತು ಲೋಕವೃದ್ಧಿಗೆ ಪರಮಾತ್ಮನ ಮೊದಲಿಯು ಮುಖ್ಯವು ಹೇಗೆಂದರೆ—ಪರಮಾತ್ಮನ ಒಂಕಾರ ರೂಪವನ್ನು ಪರನಮಾಡುತ್ತಾ, ಸತ್ಯವನ್ನು ಬಿಡದೆ ಕೈಕೊಂಡು ನಡಿಸುತ್ತಾ, ಬ್ರಾಹ್ಮಣ ಮತ್ತು ಗೋವುಗಳ ಸಮುದಾಯಕ್ಕೆ ವಂದಿಸಿ, ಅವರಿಗೆ ಭಕ್ತಿ ಶ್ರದ್ಧಾದಿಗಳನ್ನು ತೋರಿಸುತ್ತಾ ಬರುತ್ತಿರುವ ದಾದರೆ, ಮಾನವನು ಜೀವಾಂತ್ಯದಲ್ಲಿ ಪರಮಾತ್ಮನಲ್ಲಿಟ್ಟ ಭಕ್ತಿಯಿಂದ "ಅವನಿಗೆ ಮೋಕ್ಷವನ್ನು ಕೊಡು ವೆನು" ಎಂಬುದಾಗಿ ಶ್ರುತಿವಚನವು ಇರುವದು

ಗೋವು ಸಹಜವಾಗಿ ಧರ್ಮರೀತಿಯಾಗಿ ಪೂಜೆಗೆ ಯೋಗ್ಯವಾದ ಪ್ರಾಣಿಯೆಂದು ಶಾಸ್ತ್ರವಚನವಿದೆ ಗೋವನ್ನು ಯಾವನು ಹಿಂಸಿಸುವುದಾಗಲಿ, ಹತ್ಯವಾಹುದುದಾಗಲಿ ಯಾವುದೂ ಮಾಡಕೂಡದು ಹುಟ್ಟಿದ ಮಗುವಿಗೆ ಕುಡಿಸುವ ಹಾಲು ಈ ಗೋದಾನವಾಹಲು. ಈ ಮಗುವಿನ ತಾಯಿಯೂ ಇದೇರೀತಿಯಾಗಿ ಗೋವಿನ ಹಾಲನ್ನು ಕುಡಿದುದರಿಂದ ಈ ಮಗುವಿನ ತಾಯಿಗೆ ಗೋವೇ ತಾಯಿಯಾಗಿರುವುದು ಅಲ್ಲದೆ ಈ ಗೋವಿನಲ್ಲಿ ದೇವತೆಗಳೂ, ಪಿತೃಗಳೂ ಸನ್ನಿಹಿತರಾಗಿರುವ ರೆಂದು ಶಾಸ್ತ್ರವಚನವಿರುವುದರಿಂದ ಗೋವಿನ ಸರ್ವೋತ್ತಮ ಜೀವಿಯೆಂಬುದಾಗಿ ವೇದವು ಘೋಷಿಸುತ್ತಿರುವುದು ಭಗವಂತನು ತಾನಿರುವ ಸ್ಥಳವನ್ನು ನಿರೂಪಿಸಿರುವನು ಹೇಗೆಂದರೆ :—ಯಾವ ವಸ್ತುವಲ್ಲಿ ಕ್ರೀಕೃವೆಂದು ಹೇಳಿಸಿಕೊಳ್ಳುವೆನೋ ಅಲ್ಲಲ್ಲಾ ಪರಮಾತ್ಮನು ತಾನಿರುವೆನೆಂದು ಶಾಸ್ತ್ರವಿರುವೆನೆಂದಿಲ್ಲಿಸಿ, ಧೇನುಗಳಲ್ಲೆಲ್ಲಾ ಕ್ರೀಕೃವಾಮಧೇ ಕಾಮಧೇಷು. ಇದರಲ್ಲಿ ತಾನು ಇರುವೆನು. ಆಯುಧಗಳಲ್ಲೆಲ್ಲಾ ವಜ್ರಾಯುಧವು ಶ್ರೇಷ್ಠ. ಇದರಲ್ಲಿ ತಾನಿರುವೆನು. ಸಂತಾನಕ್ಕೆ ಆಧಾರಭೂತನಾದ ಪುತ್ರನೂ ಇವನಲ್ಲಯೂ ತಾನು ಇರುವೆನು. ಸರ್ವಗಳಲ್ಲಿ ಮಾನಸಿಕವು ಶ್ರೇಷ್ಠವು. ಇದರಲ್ಲಿಯೂ ತಾನು ಇರುವೆನೆಂದು ಶ್ರೀ ಕೃಷ್ಣನು ಹೇಳಿರುವ ಮಟ್ಟಿಗೆ ಗೋವಿನ ಮಹಿಮೆಯನ್ನು ತಿಳಿಯಬೇಕು.

ಈ ರೀತಿಯಾಗಿ ಗೋವಿನ ಇರುವುದರಿಂದ ಮಾನವನ ಗೋಸ್ತೋತ್ರವನ್ನು ಮಾಡುತ್ತಾ, ಕಾಯಕಶುದ್ಧಿಯನ್ನು ಇಡಿಯುತ್ತಾ, ಆದನ್ನು ಪೂಜಿಮಾಡುತ್ತಾ, ಅದಕ್ಕೆ ತಕ್ಕ ಮೇವನ್ನು ಕಾಲಕಾಲಕ್ಕೆ ಕೊಡುತ್ತಾ, ಪರಿವಾಲಿಸಿಕೊಂಡು ಬರುತ್ತಿದ್ದು ದಾದರೆ, ಜೀವಿತಕಾಲದಿರುವಾಗ ಸುಖದಿಂದ ಬದುಕಿ, ಕೊನೆಗೆ ಮುಕ್ತಿಯನ್ನು ಪಡೆಯುವುದರಲ್ಲಿ ಸಂಶಯವಿರುವುದಿಲ್ಲವೆಂದು ಶಾಸ್ತ್ರವು ನಿರೂಪಿಸುವುದು. ಗೋವು ಸಕ್ಷಗಳ ಕೊನೆಗಳನ್ನು ಳ್ಳಿಸುತ್ತಾ ವೈಪಥಳಿಕ್ಕೆ ಹತ್ಯೋಪಾದಿಯಲ್ಲಿರುತ್ತಾ, ಸುರಭಿಯೆಂಬ ನಾಮಧೇಯವಿದ್ದು, ಮಾನವರ ಇಲಿಕ್ಕೆ ಸೌಖ್ಯವನ್ನು ಕೊಡುತ್ತಾ, ನೇವೆಮಾಡುವವರ ಶರೀರವನ್ನು ಪುನೀತ ಗೈಯುತ್ತಾ ಇರುವ ಇದರ ಗೋಸುಯವು ಲೋಕಮಾನ್ಯವೆನಿಸಿಕೊಂಡಿರುವುದು ಗೋವಿನ ಗೋಮಯವಾದಿಗಳಿಂದ ಪಂಚಗವ್ಯವನ್ನು ಮಾಡಿ ಮಾನವನು ಮಾಡಿದ ಪಾಪಕ್ಕೆ ಪಂಚಗವ್ಯ ಪ್ರಾಯಶ್ಚಿತ್ತ ಹೊಂದುವಂತೆ ವಿಧಿಸಿರುವುದಕ್ಕೆ ಮೂಲವಾಗಿರುವು ದೆಂದು ಶಾಸ್ತ್ರವು ನಿರೂಪಿಸುತ್ತಿರುವುದು

ಈ ಜಗತ್ತು ವಿಶ್ವರೂಪಂತೆ, ರಾಜ, ಗೋವು, ವೈದ್ಯ, ಸದ್ಗುಣಾನ್ವಿತೆಂದವಿದ್ದರಿಂದ ಕೂಡಿ ನಿಂತಿರುವುದೆಂದು ಶಾಸ್ತ್ರವು ಹೇಳುತ್ತಿದೆ. ಇಂತಹ ಜಗತ್ತಿನಲ್ಲಿ ಜ್ಞಾನವಿದ್ದವನು ಮೇಲೆ ಹೇಳಿದಂತೆ ಇಲ್ಲದಿರೆ ವಾಸವನ್ನು ಮಾಡಲಾಗುತ್ತಿರುವುದಿಲ್ಲವೆಂದು ಶಾಸ್ತ್ರಕೋವಿದರು ಹೇಳುವರು ಸಾಧುಗುಣವನ್ನು ಹೊಂದಿ, ವಿಶೇಷ ಹಾಲನ್ನು ಕೊಡುವ ಗೋವನ್ನು ಸೈಕೊಳ್ಳಿಯಿ, ನಸ್ತಾದಿಧುನಿಷಾಗಳಂದಲಂಕರಿಸಿ, ವೇದಜ್ಞರಾದ ವಿಪ್ರನಿಗೆ ದಾನವನ್ನು ಮಾಡಿದುದರೆ ಭಗವಂತನು ಸಂತುಷ್ಟನಾಗಿ ಅವನಿಗೆ ಸದ್ಗತಿಯನ್ನು ನೀಡುವ ವೆಂದು ಶಾಸ್ತ್ರವು ಘೋಷಿಸುತ್ತಿದೆ.

ಮಾನವನು ಭಗವಂತನಿಗೆ ಪೂಜಿಸಿ ಧನ್ಯನಾಗಬೇಕಲ್ಲವೆ? ಇದಲ್ಲದೆ ಭಗವಂತನಿಗೆ ಪುಷ್ಪಪೂಜೆ ಮಾಡುವುದೆಂದರೆ ಪ್ರಾಣಿಯಲ್ಲಿ ಕಾರುಣ್ಯವನ್ನು ತೋರಿಸಿ, ಹಿಂಸಿಸದಿರುತ್ತಾ ವರ್ತಿಸುವುದೇ ಪ್ರಥಮ ಪುಷ್ಪವು ಮಾನವರು ತನ್ನಧೀನದಲ್ಲಿ ಇರುವ ಗಳನ್ನು ವಶವಡಿಸಿಕೊಳ್ಳುವುದೇ ಪುಷ್ಪ ಪೂಜೆಯು ಮನಸ್ಸನ್ನು ಶಾಂತತೆಯಲ್ಲಿಟ್ಟುಕೊಂಡಿರುವುದೇ ಪುಷ್ಪ ಪೂಜೆ. ಕ್ರಮಾಗುಣವನ್ನು ತೋರುತ್ತಿರುವುದೇ ಪುಷ್ಪ ಪೂಜೆಯಾಗಿ ಪರಿಣಾಮಿಸಿ, ವಿಶ್ವಪ್ರೀತಿಯಾಗುವುದೆಂದು ಶಾಸ್ತ್ರದಲ್ಲಿ ಹೇಳಿರುವುದು. ಸಕಲ ಜೀವಿಗಳೆಲ್ಲಾ ಒಂದೇ ಎಂದು ಭಾವಿಸಿದರೆ ಭಗವಂತನು ಸರ್ವದಾ ಗೋಚರಿಸಲ್ಪಿರುತ್ತಾ, ಪರಿಪೂರ್ಣನಾಗಿರುವನೆಂಬ ಭಾವವನ್ನು ತಿಳಿದಿರುವ ಮಾನವನು ಗೋಪೂಜೆ ಮಾಡಿದರೆ ಮೋಕ್ಷವನ್ನು ಹೊಂದುವನು ಎಂದು ಶಾಶ್ವತಸ್ವರ್ಣ ಮಾತ್ರಾಜಿ

ಉಟುಂಬಿಯಾಗಿ ಶಾಸ್ತ್ರಮರ್ಯಾದೆಯಂತೆ ನಡೆಯುವ ಗೃಹಸ್ಥನನ್ನು ದೇವತೆಗಳೂ, ಪಿತೃಗಳೂ, ಯಜ್ಞಿಗಳೂ, ಅತಿಥಿಗಳೂ ವೃದ್ಧಿಗೆ ಬರಲೆಂದು ಹಾರೈಸುತ್ತಿರುವರು ಎಂದರೆ—ಇಂತಹ ಅತಿಥಿಯು ಹಸ್ಯಕಸ್ಯಗಳಲ್ಲಿ ಅನ್ನ ಮುಖ್ಯಾಂತರವಾಗಿ ಕೊಡುವ ಹಸು ಮೊದಲಾದವುಗಳನ್ನು ದೇವತಾ ಪಿತೃಗಳು ತೀರಿ ಕೊಂಡು ಸಂತೋಷಪಡುರುವರು ಗೋವಿನಿಂದಲೇ ಮಾನವನು ನ್ಯಾಡೆಗಳನ್ನು ತೊಂದರೆ ಪಡಿಸದೆ, ಸುಚಿತ್ವದಿಂದಿರುತ್ತಾ ಸಾಧುವೃತ್ತಿಯನ್ನವಲಂಬಿಸಿ, ಪಿತೃಋಣವನ್ನು ತೀರಿಸಿಕೊಳ್ಳುವನೆಂಬ ವಿಜವಾದ ಮೆಗೆ ನೆಂದು ಹೆಸರನ್ನು ಪಡಯುವನಲ್ಲದೆ ಧನ್ಯನೆಂದೆನಿಸಿ ಕೊಳ್ಳುವನು

ಹಾಗಲ್ಲದೆ ಮಧ್ಯಸೇವನೆಯನ್ನು ಮಾಡುತ್ತಾ, ಮಾಂಸವನ್ನು ತಿನ್ನುತ್ತಾ, ಹಳಸಿದನ್ನವನ್ನು ಭುಂಜಿಸಿ ಜೀವಹಿಂಸೆಯನ್ನು ಪ್ರತಿದಿನವೂ ಮಾಡುತ್ತಾ ಬರುತ್ತಿರುವವನು ಅಶಕ್ತನನ್ನು ನುಡಿಯುತ್ತಿರುತ್ತಾ ಸಾಧುವೃತ್ತಿಗಳನ್ನನುಸರಿಸುತ್ತಿರುವವರಿಗೆ ತಾತಾವಿಧ ಅಶ್ಯಗಳನ್ನು ಕಲ್ಪಿಸಿಕೊಡುತ್ತಾ ಬರುತ್ತಿದ್ದರೆ ಇಂಥವನಿಗೆ ಮೋಕ್ಷವು

ಪ್ರಿಯಾಗುವುದೆ? ಧರ್ಮವನ್ನು ಕೈಕೊಂಡು, ಾಜಕವಾದ ಕಾರ್ಯದಲ್ಲಿ ಮನಸ್ಸನ್ನು ತೊಟ್ಟು, ಾಜಕರು ಇಷ್ಟಾರ್ಥಸಿದ್ಧರಾಗಿ ನಡೆಯುತ್ತಿರುತ್ತಾ, ಯಿಂದ ಅಗ್ನಿಹೋತ್ರಾದಿಗಳನ್ನು ಸಾಯಂಪ್ರಾತ ಲ್ಲಿ ನಡೆಸುತ್ತಾ, ಗೋವುಗಳಲ್ಲಿ ಕಾರುಣ್ಯವನ್ನು ತ್ತಾ ಇರುವವನೇ ಧನ್ಯಮಾನವನೆನಿಸಿಕೊಂಡು ವಂತನೆ ಪ್ರೀತಿಗೆ ಪಾತ್ರನಾಗುವನು.

ಗೋವು ಸರ್ವಶ್ರೇಷ್ಠವಾದ ಪ್ರಾಣಿಯೆಂದು ಭಾವಿಸಿ ೃಷ್ಟಿಕರ್ತನಿಗೆ, ಶಾಂತಿಗೂ, ದೇಹಪುಷ್ಟಿಗೂ, ಶಿಪ ಂಕ್ತಸಿಗೆಗಳಿಗೂ ತುಂಬ ಸಹಾಯವಾಗಿರುವುದೆಂದು ಪ ನಡೆಯುತ್ತಾ ಇರುವುದಾದರೆ ಗೋವನ್ನು ಪಾಡುವವನು ಗೋಲೋಕವನ್ನು ಪಡೆಯುವನು ಉತ್ತಮ ಶ್ರೇಷ್ಠತ್ವದ ಗಯೆಗೆ ಹೋಗಿ, ಗೋವನ್ನು ನಮಾಡಿವವನು ಪಿತೃ ಭಾಗ್ಯವನ್ನು ಹೊಂದುವನೆಂಬ ನ್ನ ಪಶಿಸಿದಂತೆ ನಡೆದ ರಾಜಕಾದ ವಿಶಾಲನೆಂಬಾ ು ಮಕ್ಕಳನ್ನು ಪಡೆದು ಧನ್ಯನಾಗಿರುವನು

---

**ಕ್ಯಾರಿ ಡಿ|| ಹೆರಪನಹಳ್ಳಿ ಶಾ|| ಉಚ್ಚಂಗಿದುರ್ಗದ ಸೆಂಟರ್ ಉಪಾಧ್ಯಾಯರ ಮೀಟಿಂಗು, ಬೇವಿನಹಳ್ಳಿ ತಾಂಡೆ.**

ಬೇವಿನಹಳ್ಳಿ ತಾಂಡಾ ಲೇಬರ್ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಮೇಲ್ಕಂಡ ಮೀಟಿಂಗು ಮ|| ರಾ|| ಶ್ರೀ ಚಿಕ್ಕಾಂಡಿಗನದ ಮರುಳಪೆಗೌಡ್ರ ಮರುಳಸಿದ್ಧನ ಕರರು. ಲ್ಯಾಂಡ್ ಲಂಡ್ ಅಂಡ್ ಬ್ಯಾಂಕರ್ ಪು ಅಧ್ಯಕ್ಷತೆಯಲ್ಲಿ ನೆಏರಿತು.

ಈ ಮೀಟಿಂಗಿಗೆ ಸುಂಟರಿನ 16 ಮಂದಿ ಉಪಾಧ್ಯಾಯರೂ, ಸುಕ ತೀರಾವಿದ ಯಜಮಾನರೂ ಬೇವಿನ ಳ್ಳಿ ಗ್ರಾಮದ ಜಮೀನ್ದಾರ್ ಗೌಡರುಗಳೂ ಇನ್ನು ು-ತಾವಲರು ಸೇರಿದ್ದರು

ಶಾಲಾ ಬಾಲಬಾಲಿಕೆಯರಿಂದ ಸಂಗೀತದೊಡನೆ ಪ್ರಾರ್ಥನಾಸ್ತುತಿ ಹಾಗೂ ಮಂಡೆವಾತಂರ ಪ್ರಾರ್ಥನೆ ಾದನಂತರ ಅಧ್ಯಕ್ಷರಿಗೆ ಹಾರ ತುರಾಯಿಗಳು ಸಮ ಸಲ್ಲುವ ಆಮೇಲೆ ಸದರ ಸ್ಕೂಲ್ ಹೆಡ್ಡಾಸ್ಟರ್ ಳ ಭಿತ್ತಿಪತ್ರಿಕಾಲಯದಿಂದ ರಚಿತವಾದ ಗದ್ಯರೂಪ ದ ಮತ್ತು ೆ ಯಂ. ಕಲಿವೀರಯ್ಯ, ಎನ್. ಶಾಗಿ ಜರ್‌ರವರಿಂದ ರಚಿಸಲ್ಪಟ್ಟ ಪದ್ಯರೂಪದ ಮಾನ ತ್ರಗಳು ಅಧ್ಯಕ್ಷರಿಗೆ ಅರ್ಪಿಸಲ್ಪಟ್ಟವು

ಅಧ್ಯಕ್ಷರು ತಮ್ಮ ಮಧುರವಾಣಿಯಿಂದ ಪ್ರಾರಂಭ ೋಷಣವನ್ನು ಮಾಡಿ ಸರ್ವರ ಮನಸ್ಸಿಗೂ ಆನಂದ ುಂಟುಮಾಡಿದರು. ತಂಥಿದ ಪೆಕ್ಟ್ರಿಬೆರಿಯವರಿಂದ ಳೆದ ಮೀಟಿಂಗ್ ವರದಿಯು ಓದಲಾಯಿತು

IV ನೇ ತರಗತಿಗೆ ಪ್ರಬಂಧರಚನೆಯು ಪಾಠ ನ್ನು ಆಜಮಗೇರಿ ಪಂ|| ಬೋ|| ಸ್ಕೂಲ್ ಟೀಚರ್ ್ ಸಾಗರಾಜ್‌ರವರು ಕೊಡಿಸಿದರು ಲೇಬರ್ ಸ್ಕೂಲ್ ಹೆಡ್ಡಾಸ್ಟರರು I ರಿಂದ VIII ನೆ ತರಗತಿ ಿಗೆ ಪ್ರಬಂಧರಚನೆಯನ್ನು ಬೋಧಿಸುವ ಪದ್ಧತಿ ುನ್ನು ಕುರಿತು ಸರಸವಾಗಿ ಭಾಷಣಮಾಡಿದರು ರ ಉಪಾಧ್ಯಾಯರು ಇದೇ ವಿಷಯವನ್ನೆ ಚರ್ಚ ರು

ಅಧ್ಯಕ್ಷರು ಸದರಿ ಶಾಲೆಗೆ ಒಂದು ಬಿಗ್‌ಬೆಡ್ ಆಲಾ ಗಡಿಯಾರವನ್ನು ದಾನಮಾಡಿದರು. ಅಧ್ಯಕ್ಷರು ್ಮ ಮುಖ್ಯೋಪಾಷಣದಲ್ಲಿ "ಶಾಲೆಯೇ ಒಂದು ೋಲವೆಂಕಲೂ, ಉಪಾಧ್ಯಾಯನೇ ಕೃಷಿಕನೆಂಕಲೂ, ಲಬಾಲಕರುಗಳೇ ಸಸ್ಯಗಳೆಂಕಲೂ ವರ್ಣಿಸಿ, ಬಾಲ ಾಲಿಕೆಯರ ಮುಂದಿನ ವಿಗೆಗಳನ್ನೂ, ಅವರು ಅರೋ ೃಷ್ಟಿವೈವಿಧ್ಯವನ್ನೂ, ಇತ್ಯಾದಿ ವೈವಿಧ್ಯಪೂರ್ಣ ಕರ್ತ ವ್ಯ ಉಪಾಧ್ಯಾಯರುಗಳಿಗಿರುತ್ತದೆಂಕಲೂ, ಆದ್ದರಿಂದ ತಿಯೊಬ್ಬ ಉಪಾಧ್ಯಾಯನೂ ಈ ವಿಷಯವನ್ನು ್ಮ ಅತ್ಯಧಿಕ ದೃಢವಾಗಿಟ್ಟುಕೊಂಡು ಕರ್ತವ್ಯವನ್ನು ಡಿ ಕಟ್ಟು ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇ ಲೂ, ಹಾಗೆ ಭಾವಿಪುವವನೆ ನಿಜವಾದ ಉಪಾ ಯನೆಂಕಲೂ, ಅಂಥ ಶ್ರೇಷ್ಠ ಭಾವನೆಯನ್ನು ರಮಾತ್ಮನು ಪ್ರತಿಯೊಬ್ಬ ಉಪಾಧ್ಯಾಯನಿಗೂ ಾಲಿಸಲೆಂಕಲೂ" ಭಾಷಣಮಾಡಿ ಸರ್ವ ಸಭೆಯ ರಸ್ಸಿಗೆ ಸಂತೋಷಗೊಳಿಸಿದರು ಆನಂತರ ಅಧ್ಯಕ್ಷರಿಗೆ ಸದರಿ ಶಾಲಾ ಹೆಡ್ಡಾಸ್ಟರ್‌ರಿಂದ ಧನ್ಯವಾದಗರ್ಪಿಸ ಲ್ಪಟ್ಟನಂತರ ರಾಜರ ಮಂಗಳೊಡನೆ ಸಭೆಯು ಮುಕ್ತಾಯವಾಯಿತು ತರುವಾಯ ನೆರೆದ ಉಪಾಧ್ಯಾ ಯರಿಗೆ ಉಪಹಾರ ಭೋಜನಾದಿಗಳು ನಡೆದುವು

ಶ್ರೀ ಮರುಳಸಿದ್ಧನ ಗೌರವರು ತೀವ್ರ ಚಿಕ್ಕ ವಯಸ್ಸಿನವರಾಗಿದ್ದರೂ, ಜ್ಞಾನವೃದ್ಧರೂ, ಉದಾರ ಮನಸ್ಕರೂ ಆಗಿದ್ದು ಬಡ ಉಪಾಧ್ಯಾಯರಲ್ಲಿಯೂ, ಬಡ ಕಾಲೇಜಲ್ಲಿಯೂ, ಪೂರ್ಣ ಅಂತಃಕರಣವುಳ್ಳ ವರೂ, ವಿದ್ಯಾಭಿಮಾನಿಗಳೂ ಆಗಿರುವರು ಮತ್ತು ಬಡ ಲೇಬರ್ ಶಾಲೆಗೆ ತಮ್ಮ ಸ್ವಂತ ಖರ್ಚಿನಿಂದ ಗಡಿಯಾರವನ್ನು ದಾನಮಾಡಿದುದು ತುಂಬಾ ಸ್ತೋ ತ್ರಾರ್ಹವಾಗಿರುವುದು ಶ್ರೀಪರಮಾತ್ಮನು ಇವರಿಗೂ, ಇವರ ಕುಟುಂಬ ವರ್ಗಕ್ಕೂ ಚಿರಾಯುರಾರೋಗ್ಯೈಶ್ವ ರ್ಯಾದಿಗಳನ್ನೂ ಕೊಟ್ಟು ಕಾಪಾಡಲೆಂದು ಪ್ರಾರ್ಥಿ ಸುವ.

ಸಂಘದ ಸೇಕ್ರೆಟರಿ,
L. P ಮಹಾಲಿಂಗನಗೌಡ

---

**ಶ್ರೀ ರಂಭಾಪುರೀ ಜಗದ್ಗುರುಗಳವರ ತಿರ್ಯಗಾಂದೋಲಿಕೋತ್ಸವ**

ಸೇಲಂ ಡಿ|| ಹೊಸೂರು ಟೌನ್ಸ್ಥಿಗೆ ಶ್ರೀ ರಂಭಾ ಪುರೀ ಜಗದ್ಗುರು ಶ್ರೀ ೧೦೮ ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಕಳೆದ ಜೂಗೆಲ ತಿಂ|| ೨೮ ನೇ ಶುಕ್ರವಾರ ಕವ್ಕ ಬಿರುದಾವಳಿಗಳೊಡನ ನೆಯೂ, ಪರಿವಾರದೊಡನೆಯೂ ಆಗಮಿಸಿದರು

ಹೊಸೂರುನಿವಾಸಿಗಳಾದ ವೀರಶೈವರು ಇತರ ಮತೀಯರು ಜಗದ್ಗುರುಗಳನ್ನು ನಗರದ ಬಾಗಿಲಲ್ಲಿ ಕಟ್ಟಿರುವ ಭುವನೇಶ್ವರಿಯ ಹತ್ತಿರ ಸ್ವಾಗತಿಸಿ ಅತ್ಯಂ ತ ವೈಭವದಿಂದ ಊರೊಳ್ಳಗ್ಗೆ ಅಷ್ಟೈಶ್ವರ್ಯ ಮೆರವಣಿ ಗೆಯನ್ನು ಮಾಡಿಸಿದರು ಹೊಸೂರಿನ ಹಿಂದೂ ಮತ್ತು ಮುಸ್ಲಿಂ ಪ್ರಜೆಗಳು ಮಹಾಸ್ವಾಮಿಗಳವರಿಗೆ ಪ್ರತ್ಯೇಕ ವಿನ್ನವತ್ತಳಿಗಳನ್ನು ಒಪ್ಪಿಸಿದರು ಮುಸ್ಲಿಮರ ವಿನ್ನ ವತ್ತಳಿಯು ಉರ್ದೂ ಭಾಷೆಯಲ್ಲಿಯೂ, ಹಿಂದೂಗಳ ವಿನ್ನವತ್ತಳಿಯು ಕನ್ನಡದಲ್ಲಿಯೂ ಇದ್ದಿತು

ಮಹಾಸ್ವಾಮಿಯವರು ವಿನ್ನವತ್ತಳಿಗಳಿಗೆ ಹಿಂದಿ ಭಾಷೆಯಲ್ಲಿ ಉತ್ತರ ಕೊಡುತ್ತಾ, "ಉಭಯ ಮತಿ ಯರೂ ಒಬ್ಬರ ಹೃದಯವನ್ನು ಮತ್ತೊಬ್ಬರು ಅರಿತು ಕೊಂಡು ಸೌಹಾರ್ದವಾಗಿ ನಡೆದುಕೊಳ್ಳಬೇಕೆಂದೂ ಅದರಿಂದ ಉಭಯತ್ರ ಹಿತವಾಗುವುದಲ್ಲದೆ ದೇಶದ ಅಭ್ಯುದಯವೂ ಸಾಧಿಸಲ್ಪಡುವುದೆಂದೂ ಅಪ್ಪಣೆ ಕೊ ಡಿಸಿದರು.

ಆಮೇಲೆ ಮಹಾಸ್ವಾಮಿಗಳವರು ಅಷ್ಟೈಶ್ವರ್ಯ ಯ ಳ್ಳಿ ಕುಳಿತು ಅನೆ, ಕುದುರೆ, ಒಂಟೆ, ಮೊದಲಾದ ವ ಹನಗಳಿಂದಲೂ, ಸಕಲ ರಾಜಬಿರುದಾವಳಿಗಳಿಂದಲೂ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೊರಟರು ನಗರದ ದ್ವಾರದಲ್ಲೂ ಜುಮ್ಮಾಮಸೀದಿಯ ಹತ್ತಿರ ದಲ್ಲೂ, ಹೊಸ ಮಸೀದಿಯ ಮುಂದೆಯೂ ಇನ್ನೂ ಕೆಲವು ಕಡೆಗಳಲ್ಲಿಯೂ ಪುರ ಮಹಾಜನರು ಮಹಾ ಸ್ವಾಮಿಗಳವರನ್ನು ಸತ್ಕರಿಸಲು ಭುವನೇಶ್ವರಿಗಳನ್ನೂ ಮಂತ್ರಪಠಗಳನ್ನೂ ಉಚ್ಚರಿಸಿದರು.

ಎರಡನೆಯ ದಿನ ಮಹಾಸ್ವಾಮಿಗಳ ಬಿಡಾರದಲ್ಲಿ ಹೊಸೂರಿನ ವೀರಶೈವ ಧರ್ಮಪ್ರಚಾರಿಣಿ ಸಭೆಯ ವರಿಂದ ಜಗದ್ಗುರುಗಳ ಪಾದಪೂಜೆ, ರುದ್ರಾಭಿಷೇಕ ಮುಂತಾದುವುಗಳನ್ನು ನಡೆಸಿದರು ಪೂಜಾದಿಗಳು ಮುಗಿದ ತರುವಾಯ ಮಹಾಸ್ವಾಮಿಗಳವರು ಶ್ರೀಮರ್ಮ ದೇಶಿಕೆಶ್ವಿಯವರಿಗೂ ಅವರ ಪಂಗಡದ ಹೊಸೂರು ನಿವಾಸಿಗಳವರಿಗೂ ವೀರಶೈವರೂ ತೀರ್ಥಪ್ರಸಾದಗಳನ್ನು ಅಮರ್ಯಾದಿಸಿದರು ಆ ದಿನವೂ ಬಿಡಾರದಲ್ಲಿ ಭಕ್ತಾದಿ ಗಳಿಗೆ ಭೋಜನವು ನಡೆಯಿತು

ಮಧ್ಯಾಹ್ನ ಹೊತ್ತು ಳಿಂಟೆಗೆ ನಡೆದ ಸಭೆಯಲ್ಲಿ ಹೊಸೂರು ವೀರಶೈವ ನಿವಾಸಿಗಳು ವಿನ್ನವತ್ತಳಿಯನ್ನೆ ಪಿಸಿ, ವೀರಶೈವರಲ್ಲಿ ಧರ್ಮಜಾಗೃತಿಯನ್ನುಂಟುಮಾಡ ಲು ಜಗದ್ಗುರುಗಳು ಕೈಗೊಂಡಿರುವ ಧಾರ್ಮಿಕ ಪ್ರವಾ ಸವನ್ನು ಅಭಿನಂದಿಸಿದರು ಧಾರ್ಮಾಚಾರ್ಯಗಳು ವಿನ್ನವತ್ತಳಿಗೆ ಯಥೋಚಿತವಾದ ಉತ್ತರವನ್ನು ದಯ ಪಾಲಿಸಿದರು

---

|| ಶ್ರೀಜಗದ್ಗುರು ಪಂಚಾಚಾರ್ಯೋ ಪ್ರಸೀದಂತು ||

**ಗಣಾರಾಧನೆ**

ಶಿವಮೊಗ್ಗಾ ಡಿ|| ಹಾರನಹಳ್ಳಿ ನಿವಾಸಿಗಳಾದ ಶಿಟ್ಟಿಪ್ಪಳ ರುದ್ರಪ್ಪನವರ ಪ್ರಥಮ ಧರ್ಮಪತ್ನಿಯವ ರಾದ ನೇರಲಮ್ಮನವರು ಆಷಾಢ ಬ|| ೮ ಸೋಮವಾರ ಶಿವೈಕ್ಯರಾದರು. ಇವರು ಗುರುಲಿಂಗ ಜಂಗಮಸೇವೆಯ ಲ್ಲಿಯೂ ಪತಿಭಕ್ತಿಯಲ್ಲಿಯೂ, ಬರೋಪಕಾರ ಒದ್ದಿ ಯ ಲ್ಲಿಯೂ ಆದರ್ಶಪ್ರಾಯರಾಗಿ ಸರ್ವಜನರ ಪ್ರೀತಿಗೆ ಪಾತ್ರರಾಗಿದ್ದರು. ಕಳೆದ ತಾ|| ೩೦ ನೆಯ ಗುರುವಾರ ಸ್ವಾತಕಾಲ ಶ್ರೀ ರುದ್ರಾಜೀಸ್‌ರವರು, ಹಾಗೂ ಗುರು ವಾರ ಪೂಜೆಯೂ, ಮಧ್ಯಾಹ್ನ, ಭೂರುದ್ರಗಣಸಂತ ರ್ಪಣೆಯೂ ಅತ್ಯಂತ ವಿಜೃಂಭಣೆಯಿಂದ ನಡೆದು ಇದೇ ದಿನ ಸಾಯಂಕಾಲ ಶ್ರೀಮನ್ಮಳಲಿ ಮಠದ ಶ್ರೀಗಳವರ ಅಧ್ಯಕ್ಷತೆಯಲ್ಲಿ ಕೀರ್ತನಕೇಸರಿ ಕವಿಭೂಷಣೇತ್ಯಾದಿ ಬಿರುದಾಂಕಿತರೂ, ಶ್ರೀ ರಂಭಾಪುರೀ ಮಹಾಸಂಸ್ಥಾ ನದ ಧರ್ಮೋಪದೇಶಕರೂ ಆದ ವೀ|| ಗುಬ್ಬಿ ಶಿವ ರುದ್ರಶಾಸ್ತ್ರಿಗಳವರಿಂದ ಗುರು ಸಂಕೀರ್ತನೆಯು ಬಹು ಸರಸವಾಗಿ ಅನುಷ್ಠಾನವಮಾಡಲ್ಪಟ್ಟಿತು ಈ ಸಮಾ ರಂಭಕ್ಕೆ ಪಳಲಿ, ಹೊಬ್ಬಾಪುರ, ಕಂಚೀಕೊಪ್ಪ ಗ್ರಾಮಗ ಗ ಗುರುಚರಕಲ್ಟ್ಯುಧ್ಯಕ್ಷಸ್ವಾಮಿಗಳವರೂ, ಶಿವ ಮೊಗ್ಗಾ, ಚೆಲೂರು, ದೊಡ್ಡೆಕ್ಕಿನಹಳ್ಳಿ, ಸೈಸವಳ್ಳಿ, ಜಂ ಮೇನಹಳ್ಳಿ, ಅಯನೂರು, ಕೋಟೆಗಂದ್ಲಿ ಮುಂ ತಾದ ಪ್ಲೆಗಳ ಅನೇಕ ಜನ ಬಂಧುಮಿತ್ರರೂ ಆಗಮಿ ಸಿದ್ದರು.

ಓರ್ವ ಪ್ರತ್ಯಕ್ಷದರ್ಶಿ

---

**ದಣ್ಣೆನೆ ಗಿಡಗಳು ಫಲ ಬಿಡದಿರುವುದಕ್ಕೆ ಕಾರಣಗಳು**

ಆನೇಕ ಹಣ್ಣಿನ ಗಿಡಗಳು ಆಥವಾ ಮರಗಳು ಕಾಲಕ್ಕೆ ಸರಿಯಾಗಿ ಫಲ ಬಿಡುವುದಿಲ್ಲ. ಕೆಲವು ವೇಳೆ ಹೆಚ್ಚಾಗಿಯೂ ಫಲ ಕೊಡುವುದಿಲ್ಲ ಇನ್ನು ಕೆಲವು ಗಿಡಗಳು ಕೆಲಂಕಲ ಫಲ ಕೊಟ್ಟು ಆಪಂತರ ಸೊಡ್ಡಾ ಗುತ್ತವೆ ಹೀಗಾಗುವುದಕ್ಕೆ ಅನೇಕ ಕಾರಣಗಳವೆ. ಆವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ತಿಳಿಸಲಾ ಗಿದೆ —

ಹಣ್ಣಿನ ಗಿಡಗಳು ಯಾವಾಗ ಫಲಕ್ಕೆ ಬರುತ್ತವೆ ಎಂಬ ವಿಷಯದಲ್ಲಿ ಭಿನ್ನಭಿಪ್ರಾಯಗಳಿವೆ ಒಂದೇ ಹಣ್ಣಿನ ಗಿಡದ ಬೇರೆಬೇರೆ ಜಾತಿಗಳಲ್ಲಿ ಫಲ ಕೊಡು ವ ವೆಯಸ್ಸು ಬೇರೆಬೇರೆಯಾಗಿರುತ್ತದೆ. ಉದಾಹರಣೆ ಗಾಗಿ ಸೇಬಿನ ಗಿಡವನ್ನು ತೆಗೆದುಕೊಳ್ಳೋಣ ಕೆಲವು ಗಿಡಗಳು ೪-೫ ವರ್ಷ ವಯಸ್ಸಾಗಿರುವಾಗ ಸ್ವಲ್ಪವೇ ಹಣ್ಣು ಬಿಡುತ್ತವೆ ಆವುಗಳಲ್ಲಿ ಒಂದೊಂದು, ಮಿಕ್ಕೆ ಲ್ಲ ಗಿಡಗಳು ಫಲ ಬಿಡುವುದಕ್ಕೆ ಬಹಳ ಕಾಲಕ್ಕೆ ಮುಂ ಚೆಯೇ ಫಲಕ್ಕೆ ಬರುತ್ತವೆ ಇನ್ನು ಕೆಲವು ಎಷ್ಟು ಕಾಲವಾದರೂ ಫಲ ಬಿಡುವುದಿಲ್ಲ ಒಂದುವೇಳೆ ಫಲ ಬಿಟ್ಟರೂ ಬಹಳ ಸ್ವಲ್ಪ. ಹೀಗೆ ತಡವಾಗಿ ಫಲಕ್ಕೆ ಬರುವುದನ್ನು ಎಷ್ಟರಮಟ್ಟಿಗೆ ತಪ್ಪಿಸಬಹುದೆಂಬ ವಿಷ ಯವು ಇನ್ನೂ ಕಂಡುಹಿಡಿಯಬೇಕಷ್ಟೆ ಅಂಥವಾಗಿ ಹವ ಮತ್ತು ವೆಪಣಿಗೆಗೆ ಬೇಕಾದ ಇತರ ಅಂಶ ಗಳು ಅನುಕೂಲವಾದಲ್ಲಿ ಹಣ್ಣಿನ ಗಿಡಗಳು ಚಾಗ್ಯ ತೆಯಾಗಿ ಫಲಕ್ಕೆ ಬರುವುತ್ತ ಹಣ್ಣಿನ ಗಿಡಗಳಿಗೆ ಕೊಡುವ ಗೊಬ್ಬರ, ಆಭ್ಯೆಪೆಮಾಡುವ ಕ್ರಮ, ಇವಿಗಿ ನಿನೆ ಗುಣ—ಇವೆಲ್ಲವೂ ಫಲ ಬಿಡುವ ವಯಸ್ಸಿನ ಮೇಲೆ ಪರಿಣಾಮವನ್ನುಂಟುಮಾಡುವಲ್ಲಿ ಕೆಲವು ವೇಳೆ ಆಲ್ಪಿಕೆ ಕಡಿಮೆಯಾಗುವುದರಿಂದಲೋ ಅಥವಾ ಹೆಚ್ಚು ವಯಸ್ಸಾಗಿರುವುದರಿಂದಲೋ ಹಣ್ಣಿಗೆ ಗಿಡ

[೨ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೬೫ನೆಯ ಆಗಸ್ಟ್ ಹಾ॥ ೭ನೆಯ ಸೋಮವಾರ

## ಗೃಹಸ್ಥಾಶ್ರಮ.

ಹಿಂದುಗಳಲ್ಲಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಗಳೆಂಬ ನಾಲ್ಕು ಆಶ್ರಮಗಳುಂಟು ಈ ನಾಲ್ಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮವೇ ಮಿಕ್ಕ ಆಶ್ರಮಗಳಿಗೆ ಆಧಾರವಾಗಿರುತ್ತದೆ ಈ ಗೃಹಸ್ಥಾಶ್ರಮಿಗಳ ಸಹಾಯವಿಲ್ಲದಿದ್ದರೆ ಬ್ರಹ್ಮಚಾರಿಗಳಾಗಲಿ, ವಾನಪ್ರಸ್ಥರಾಗಲಿ ಸನ್ಯಾಸಿಗಳಾಗಲಿ ಯಾರೂ ಜೀವಿಸಲು ಸಾಧ್ಯವಿಲ್ಲ

ಯಥಾ ನದೀಸಾಗರಸ್ಯೇ ನಾಗಃ ಯಾಂತಿಸಂಸ್ಥಿತಾಃ
ತಥೈವಾಶ್ರಮಿಣಾಸ್ಸರ್ವೇ ಗೃಹಸ್ಥೇ ಯಾಂತಿ ಸಂಸ್ಥಿತಿಂ॥

ಗಂಗಾನದಿ ಸಮುದ್ರವನ್ನು ಸೇರುವುದೇ ಮೊದಲಾದ ಎಲ್ಲ ನದಿಗಳೂ ಕೊನೆಯಲ್ಲಿ ಸಮುದ್ರವನ್ನು ಸೇರಿ ಅಲ್ಲಿ ಸ್ಥಿರವಾಗಿ ನಿಲ್ಲುವಂತೆ ಯೋಚಿಸಿದರೆ ಎಲ್ಲ ಆಶ್ರಮಿಗಳೂ ಕೊನೆಯಲ್ಲಿ ಗೃಹಸ್ಥಾಶ್ರಮವನ್ನು ಸೇರಿ ಅಲ್ಲಿ ಸ್ಥಿರವಾಗಿ ನಿಲ್ಲುವಂತೆ ತಮ್ಮ ಜೀವನವನ್ನು ನಡೆಸಿ ಪರಲೋಕಕ್ಕೆ ಪ್ರಯಾಣ ಮಾಡುತ್ತಾರೆ ಎಂದು ತಿಳಿಯಬೇಕು ಗೃಹಸ್ಥಾಶ್ರಮವೇ ಧರ್ಮಾರ್ಥಕಾಮಗಳಿಗೆ ಆಧಾರವಾಗಿರುತ್ತದೆ ಈ ಗೃಹಸ್ಥಾಶ್ರಮಿಗಳಿಗೆ ಸಹಾಯ ಮಾಡಿದ ಬ್ರಹ್ಮಚಾರಿಗಳೂ, ವಾನಪ್ರಸ್ಥರೂ, ಸನ್ಯಾಸಿಗಳೂ, ಗೋವುಗಳೂ, ಇತರ ಪ್ರಾಣಿಗಳೂ ಈ ಗೃಹಸ್ಥಾಶ್ರಮದಲ್ಲಿ ಸ್ವಾಧೀನವಿಲ್ಲದೆ ಜೀವಿಸುತ್ತವೆ ಎಂದು ಗೃಹಸ್ಥಾಶ್ರಮಿಗಳನ್ನು ತಾಯಿಗೆ ಹೋಲಿಸಿರುತ್ತಾರೆ. ಗೃಹಸ್ಥಾಶ್ರಮಿಯು ಯೋಗವಿದ್ಯೆಯುಳ್ಳವರೆ, ಆತ್ಮವಿಚಾರವಿಲ್ಲದೆ ಪುನರ್ಜನ್ಮವೆಂಬುದಿಲ್ಲ, ಇತರಾಶ್ರಮಿಗಳ ಪೋಷಣೆಯಿಂದಲೂ ದನ್ಯಜೀವಿಯಾಗಿ ಪರಮಾತ್ಮನ ಸಂಪೂರ್ಣಾನುಗ್ರಹಕ್ಕೆ ಪಾತ್ರನಾಗುವನು ಆದುದರಿಂದ ಪೂಜ್ಯಕಾದ ತಾಯಿಯಂತೆ ಗೃಹಸ್ಥಾಶ್ರಮವನ್ನು ಹೊಂದಿದ ಮಾನವನು ಏಕಪತ್ನೀವ್ರತಸ್ಥನಾಗಿಯೂ, ಜಿತೇಂದ್ರಿಯನಾಗಿಯೂ, ಪಾಪಭೀರುವಾಗಿಯೂ, ಗುರುಹಿರಿಯರಲ್ಲಿ ಭಕ್ತಿಯುಳ್ಳವನಾಗಿಯೂ ಧರ್ಮಪೂರ್ವಕ ದ್ರವ್ಯಾರ್ಜನೆಯುಳ್ಳವನಾಗಿಯೂ, ಸದಾಚಾರ ಸಂಪನ್ನನಾಗಿಯೂ ಇರಬೇಕು ಸಕಲಾಶ್ರಮವರ್ತಿಗಳನ್ನು ಪೋಷಿಸುವ ಮಹಾಭಾರವು ಈ ಗೃಹಸ್ಥನಲ್ಲಿ ಬಿದ್ದಿರುವುದರಿಂದ ಈ ಗೃಹಸ್ಥನು ಧರ್ಮಮಾರ್ಗದಿಂದ ಚ್ಯುತನಾಗಿ ಅಧರ್ಮಮಾರ್ಗದಲ್ಲಿ ಎಂದು ಕಾಲಿಡುವನೋ ಅಂದೇ ಇವನ ಅನ್ಯೋನ್ಯಕಲ್ಪಿತಾಧಿಪತ್ಯ ಹೃದಯದಲ್ಲೂ ಪರಿಣಾಮ ಮಾಡುವುದೆಂಬುದೇ ಸಾಕ್ಷಾತ್ ಪರಮೇಶ್ವರನ ಸಾಕ್ಷಾತ್ಕಾರಕ್ಕೆ ಯೋಗ್ಯಕ್ಷೇತ್ರವಾಗಿ ಭಾರವನ್ನು ಹೊರಿಸುತ್ತಾನೆ ಈಗಿನ ವಾತಾವರಣದಲ್ಲಿ ಸರ್ವಾಶ್ರಮಗಳಿಗೂ ಮೂಲಸ್ತಂಭರೂಪವಾದ ಗೃಹಸ್ಥಾಶ್ರಮಧರ್ಮವು ಶಿಥಿಲಾವಸ್ಥೆಯನ್ನೇ ಹೊಂದುತ್ತಿರುವುದು ಶೋಚನೀಯವಾಗಿದೆ. ಪರಮೇಶ್ವರನು ಈ ಧರ್ಮಕ್ಕೆ ಜಯವನ್ನೀಯಲಿ.

## ಒಳದೇಶದ ವೃತ್ತಾಂತಗಳು.

ಶಿವಮೊಗ್ಗ ಡಿಸ್ಟ್ರಿಕ್ಟ್ ಚಂದ್ರವಳ್ಳಿಯಲ್ಲಿ ಭೂಗರ್ಭ ಕೋಧನ ಇಲಾಖೆಯವರು ೧೯೬೪ನೇ ಹಿಂದೆ ಸ್ಥಿಪಿಸಿದ್ದ ಕೋಧನ ಕಾರ್ಯಗಳನ್ನು ಮುಂದುವರಿಸಲು ಸರ್ಕಾರದವರು 1000 ರೂಪಾಯಿಗಳನ್ನು ಮಂಜೂರು ಮಾಡಿರುವರೆಂದು ತಿಳಿಸಬಯಸುತ್ತೆ

ಮೈಸೂರು ಸರ್ಕಾರ್ದಿನಿಂದ ಸುಮಾರು 6 ವೈಲು ದೂರದಲ್ಲಿ ಹರಿಯುವ ಕಾವೇರಿ ನದಿಯ ನಾಲೆಯನ್ನು ತಿರುಗಿಸಿ ಮೈಸೂರಿಗೆ ನಾಲೆಯನ್ನು ತರಲು ಒಂದು ಸ್ಕೀಮು ಸರ್ಕಾರದವರ ಆಲೋಚನೆಯಲ್ಲಿದೆಯೆಂದೂ ಇದು ಸಿದ್ಧವಾದ ಮೈಸೂರು ನಗರದಲ್ಲಿರುವ ನೀರಿನ ಕೊಂಬೆಯು ಪರಿಹಾರವಾಗುವೆಯೆಂದೂ ಹೇಳಲಾಗಿದೆ.

ಮೈಸೂರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾದ ರಾಜಕಾರ್ಯಪ್ರವೀಣ ಎನ್ ಎಸ್ ಸುಬ್ಬರಾಯರು ವಿಶ್ವವಿದ್ಯಾಲಯಗಳಿಗೆ ಸಂಬಂಧಪಟ್ಟು ವಿಷಯಗಳಲ್ಲಿ ವಿಶೇಷ ಅನುಭವವನ್ನು ಪಡೆದು ಬಹಳ ಉಪಕಾರಿಗಳಾಗಿದ್ದ ಈ ಸಮಯದಲ್ಲಿ ಅವರಿಗೆ ಇಂಗ್ಲೆಂಡಿನಲ್ಲಿ ಪ್ರವಾಸಮಾಡುವರು ಇವರಿಗೆ ಇಂಪೀರಿಯಲ್ ವಿಲೇಷರ್ಸ್ ಟ್ರಸ್ಟಿನವರು ಟ್ರಸ್ಟಿನ ನಿಧಿಯಿಂದ 100 ಪೌಂಡುಗಳನ್ನು ಕೊಡಲಿರುವರು ಪ್ರೀ ಸುಬ್ಬರಾಯರು ಇಪ್ಪತ್ತೆಲ್ಲೇ ಪ್ರಯಾಣವಾಗಲಿರುವರು

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸ ಇಲಾಖೆಯವರು ನಡೆಯಿಸುತ್ತಿರುವ ಎಸ್ ಎಸ್ ಎಲ್ ಸಿ ಪರೀಕ್ಷೆಗಳು, ಸಂಸ್ಕೃತ, ಮೌಲ್ವಿಗಳ ಮುಪ್ಪಿನಿಗಳ ಪರೀಕ್ಷೆಗಳು, ಕನ್ನಡ ಮಿಡ್ಲ್ ಸ್ಕೂಲ್ ಪರೀಕ್ಷೆಗಳನ್ನು ಈ ಸಲದಿಂದ ಸ್ವತಂತ್ರವಾಗಿ ನಡೆಸಲು ಸರ್ಕಾರದವರು ನಿರ್ಧರಿಸಿರುವರು ಈ ಪರೀಕ್ಷೆಗಳಿಗೆ ಸಂಬಂಧಪಟ್ಟ ಎಲ್ಲ ಕೆಲಸಗಳನ್ನೂ ಮಾಡಿಕೊಡಲು ಮೈಸೂರಿನಲ್ಲಿ ವಿದ್ಯಾಭ್ಯಾಸದ ಇಲಾಖೆಯ ಜೈರೆಕ್ಟರರು ಮಾನಿರುವ ಸಲಹೆಯನ್ನು ಸರ್ಕಾರದವರು ಒಪ್ಪಿರ ಹಾಗಿರೆ ಇಲ್ಲಿಂದವರೆಗೂ ಮಾರ್ಚ್ ತಿಂಗಳು ೩೧ನೆಯ ತಾರೀಖಿನವರೆಗೆ ನಡೆಯುತ್ತಿದ್ದ ಎಸ್ ಎಸ್ ಎಲ್ ಸಿ ಪರೀಕ್ಷೆಯು ಇನ್ನು ಮುಂದೆ ಮಾರ್ಚ್ ತಿಂಗಳ ೧ ರಿಂದಲೇ ಪ್ರಾರಂಭವಾಗುವುದು

ಕಳೆದ ತಿಂಗಳು 18 ನೆಯ ತಾರೀಖು ಬೊಂಬಾಯಿಯಲ್ಲಿ ಹಡಗು ಹತ್ತಿದ ನಮ್ಮ ಶ್ರೀನುಮ್ಮನರಿಜಾದವರ ಸನ್ಯಾಸ್ಯಯಾತ್ರೆಯು ಸುಖವಾಗಿ ಜರುಗಿತು. ಆವರು ಜುಲೈ 1ನೆಯ ತಾರೀಖಿನ ದಿನ ಕೆಂಪುಸಮುದ್ರವಲ್ಲಿರುವ ಜಿಬೂಲ್ ಎಂಬ ಬಂದರನ್ನು ತಲುಪಿ ಅಲ್ಲಿನ ಸೌದ್ಯರವರ ಅನುಮತಿಯಿಂದ ಹಡಗಿಳಿದು ಸುತ್ತು ಮತ್ತಿನ ಪ್ರದೇಶಗಳನ್ನೆಲ್ಲಾ ಪರಿಯರ್ಶಿಸಿದರು. ಅನಂತರ ಅಲ್ಲಿಂದ ಹೊರಟ 2 ನೆಯ ತಾರೀಖು ಸಾಯಂಕಾಲ ಪೋರ್ಟ್ ಸಾದ್ ಬಂದರನ್ನು ತಲುಪಿದೆನು ತಾರೀಖು 21 ರಲ್ಲಿ ನೇಪಲ್ಸ್ ನಗರವನ್ನು ಸೇರಿ ಅಲ್ಲಿಂದ ರೋಂ ಪಟ್ಟಣವನ್ನು 31 ನೆಯ ತಾರೀಖಿನ ದಿನ ಸೇರಿದರು. ಅವೇ ದಿನ ಅಲ್ಲಿ ಸ್ಟೇಷನ್ ಗಳಿಗೆಗಳನ್ನು ಭೇಟಿಮಾಡಿ ಅವರ ಕುಶಾಲ್ ಪ್ರಶ್ನೆಯನ್ನು ಮಾಡಿ ರತ್ನಖಚಿತ ಶಿಲುಬೆಯನ್ನು ಎರವರಿಗೆ ಅರ್ಪಿಸಿದರು. ಪೋಪರೂ ಸಹ ಶ್ರೀನವರಾಜರಿಗೆ ಒಂದು ಸುವರ್ಣಪದಕವನ್ನು ಮಯಪಲಿಸಿದ್ದರು

## ಬೊಂಬಾಯಿ ಸುಂಬ್ರಿಗಳಿಗೆ ಬಹಿಷ್ಕಾರ

ಬೊಂಬಾಯಿನಗರದ ಕಾರ್ಪೊರೇಷನ್ನಿನವರಲ್ಲಿ ಸಭೆ ಸೇರಿ ಬೊಂಬಾಯಿ ಅಧಿಸ್ಥಿತದ ಮಂತ್ರಿಮಂಡಲಿಯಲ್ಲಿರುವ ಅರೋಗ್ಯ ಶಾಯಿಯ ಸಚಿವರಾದ ಹಾ॥ ಎಂ ಗಿಲ್ಡರ್‌ರವರನ್ನು ತಮ್ಮ ಸಮಾಜದಿಂದ ಬಹಿಷ್ಕರಿಸಕಕ್ಕೆ ಪ್ರೇರಿಸಿ ಒಂದು ನಿರ್ಣಯವನ್ನು ಸರ್ವಾಮುಮತದಿಂದ ಮಂಜೂರು ಮಾಡಿದರು ಇದಕ್ಕೆ ಕಾರಣವು—ಬೊಂಬಾಯಿ ಸರ್ಕಾರದವರು ಆಗಸ್ಟ್ 1 ನೆಯ ತಾರೀಖಿನಿಂದ ಜಾರಿಯಲ್ಲಿ ತರಲಿರುವ ಕಾನಸ್ಟಿಟೂಷನಲ್ಲಿನ ಪಾರ್ಲಿಮೆಂಟ್ ಅಧಿನಿಯಮಗಳನ್ನು ಅಂಡಿಸಿ ಪ್ರತಿಭಟಿಸುವಲ್ಲಿ ತಮ್ಮ ಜನಾಂಗಕ್ಕೆ ಸೇರಿದ ಹಾ॥ ಗಿಲ್ಡರ್‌ರವರು ಈ ಪಾಪಕರ್ಮ ಕೃತ್ಯಾಸಕ್ತರಿಯಿಂ ಜಾಗಿ ತರಬೇಕೆಂದು ಕಾರ್ಯಸಾಧನೆ ಮಾಡುತ್ತಿರುವುದು ಪಾರ್ಲಿಜನಾಂಗದವರಿಗೆ ಸಹಿಸಲಾರದಾಗಿರುವನೇ ಆಗಿದೆ.

# ವರ್ತಮಾನಸಂಗ್ರಹ.

## ಹೃದಯಾಬಾಮ ಸತ್ಯಾಗ್ರಹ

ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿಯು ಜುಲೈ 31 ನೆಯ ತಾರೀಖಿನ ದಿವಸ ಪೂನಾದಲ್ಲಿ 7 ಘಂಟೆಗಳ ಕಾಲ ಚರ್ಚೆ ನಡೆಯಿಸಿ ಕೊನೆಗೆ ಹೃದಯಾ ಬಾದಿನ ಸತ್ಯಾಗ್ರಹವನ್ನು ಸಲ್ಲಿಸಬೇಕೆಂಬ ತೀರ್ಮಾನಕ್ಕೆ ಬಂದಿತು ಹೊಸ ರಾಜ್ಯಾಂಗವ್ಯವಸ್ಥೆಯಲ್ಲಿ ಹಿಂದೂ ಪ್ರಜೆಗಳ ಕುಂದುಕೊರತೆಗಳನ್ನು ನ್ಯಾಷಾ ಸರ್ಕಾರದ ವರ. ಎಷ್ಟುಮಟ್ಟಿಗೆ ನಿವಾರಿಸುವರೆಂಬುದನ್ನು ನೋಡೋ ಣವೆಂದು ಹೇಳಿ ಸತ್ಯಾಗ್ರಹವನ್ನು ಸಲ್ಲಿಸುವುದಾಗಿ ವರ್ಕಿಂಗ್ ಕಮಿಟಿಯು ತೀರ್ಮಾನಿಸಿದೆ

## ಪರ್ವತಾರೋಹಿಗಳು ಅದೃಶ್ಯರಾದರು

ಹಿಮಾಲಯ ಪರ್ವತವನ್ನು ಹತ್ತಲು ಪ್ರಯತ್ನಪಟ್ಟ ಇಬ್ಬರು ಫ್ರೇಂಚಿನವರೂ, ಇವರ ನಾಯಕರಾದ ಮಿ ಕಾರ್ಪಿಸ್ಸಿಯವರೂ ಹಿಮಾದ್ರಿಗೆ ಶಿಪ್ಪಿ ಜುಲೈ 18 ರಲ್ಲಿ ವೈತರಾಗಿರಬೇಕೆಂದು ತಿಳಿಸಿಬರುತ್ತಿದೆ ಪರ್ವ ತಾರೋಹಿಗಳು ಜುಲೈ 18 ರ ರಾತ್ರಿ 20500 ಅಡಿಗಳ ಎತ್ತರದಲ್ಲಿ ಮೂರು ದೇರೆಗಳಲ್ಲಿದ್ದರು ಏರಹೆನೆಯ ದೇ ರಾದಲ್ಲಿದ್ದ ಜಾಗಿ ಬಾಯ್ಕ್ ಮತ್ತ ಕ್ಲಾರ್ಸರ್‌ರವರು ಎನ್ನಹೋಗಿ ನೋಡಿದಾಗ ವೇಲ್ಲಂಡವರ ಳಕೆಗೆ ಕಂಡುಬರಲಿಲ್ಲ ಆವರು ಏನಾದರೆಂಬ ಬಗ್ಗೆ ಅಧಿಕಾರಿ ಯ ತಿಳಾಗಿ ಏನೂ ತಿಳಿದುಬಂದಿಲ್ಲ

## ಈಜು ಕೆಲಿಯಲು ಯಂತ್ರಸಾಧನ

ಬ್ಲಿ ಕೆಲಸಗಳು ಯಂತ್ರ ಸಹಾಯದಿಂದ ನಡೆಯು ತ್ತಿರುವ ಈ ಯುಗದಲ್ಲಾದರೆಲ್ಲ, ಸೀರಿಕ್ಲಿ ಈಜುಕಲಿಸು ಲು ಒಂದು ಯಂತ್ರ ನಿರ್ಮಾಣವಾಗಿದೆ ಇದು ನಿತ್ಯ ಚ್ಛೆಯಿಂದ ಜಲಿಸುತ್ತದೆ ಈಜುಕಲಿಯ ಲಪೇಕ್ಷೆಯು ಳ್ಳವರು ಇದರ ಮೇಲೆ ಏಲಗಿಕೊಂಡರೆ ಇದು ಈಜು ವಾಗ ಯಾನರೀತಿ ಕೈ ಕಾಲುಗಳನ್ನು ಆಡಿಸಬೇಕೋ ಅದೇ ರೀತಿಯಲ್ಲಿ ಆವರ ಅಯ ವಗಳನ್ನು ತಿರಿಸು ತ್ತದೆ ಇದರಿಂದ ಮುಳುಗಿ ಹೋಗುವ ಅಪಾಯವಿಲ್ಲವೆ ರಲ್ಲಿ ವಿಷವೂ ಈಜುಗಳನ್ನು ಸಲಭವಾಗಿ ಕಲಿಯಬು ಹುದಾಗಿದೆ

## ಮೊದಲನೆಯ ತಪ್ಪಿಗಾಗಿ ಶಿಕ್ಷೆಯಿಲ್ಲ

ಯಾವನಾದರೂ ನೊದಲನೆಯ ಸಾರಿ ತಪ್ಪುಮಾಡಿ ದರೆ ಅವನು ಅಧಿಕಶಿಕ್ಷೆಗೆ ಅರ್ಹನಾಲ್ಲವೆಂಬ ನ್ಯಾಯವು ಪಶ್ಚಿಮದೇಶಗಳಲ್ಲಿ ಅನ್ವಯಿಸುವುದು ಈಚೆಗೆ ಇಂಗ್ಲೆಂಡಿನ ನ್ಯಾಯಾಸ್ಥಾನವಲ್ಲಿ ಸ್ಥಿರಪಟ್ಟಿದೆ ಪ್ರೀತಿಯಿಂದ ಸಾಕಿ ಲ್ಲಟ್ಟಿದ್ದ ಒಂದು ಕುದುರೆ ಮರಿಯು ಒಬ್ಬ ಜೆಗಸಿನ ವ್ಯಾಪಾರಿಯ ಕಚ್ಚಿ ಅವನನ್ನು ನೆಲಕ್ಕುರುಳಿಸಿ ತುಳಿ ಯಿತು ಆ ಹೆಂಗಸು ಕುದುರೆಯ ಯಜಮಾನರೀಗೆ ಪರಿಹಾರಕ್ಕೆ ದಾವಿಮಾಡಿದಾಗ ಕೋರ್ಟಿನವರು ಕುದು ರೆಯ ಮಾಲೀಕನು ಆಕಸಿ 300 ಪೌಂಡು ಪರಿಹಾರವನ್ನು ಕೊಡಬೇಕೆಂದು ತೀರ್ಪಿತ್ತರು ಈ ತೀರ್ಮಾನದೆಯಲ್ಲಿ ಕುದುರೆಯ ಮಾಲೀಕನ ಪೌಲಿನ ನ್ಯಾಯಾಸ್ಥಾನವಲ್ಲಿ ಅಪ್ಪೀಲ್‌ಮಾಡಿಕೊಂಡನು ಆ ನ್ಯಾಯಾಸ್ಥಾನವು ನಿಷಾರಣೆಮಾಡಿ ಕಾನೂನಿನ ಗ್ರಕಾರ ಆ ಪಶುವಿನ ಸ್ವಭಾವವು ಮೊದಲಿನಿಂಲೂ ಜನಗಳಿಗೆ ತೊಂದರೆ ಕೊಡುವಂಥಾದ್ದಾಗಿರಲಿಲ್ಲವೆಂದು ಮಾಲೀಕನಿಗೆ ತಿಲಿವಳ್ಳಿ ಮಾತ್ರ ಅವನು ಪರಿಹಾರ ಕೊಡಬೇಕಾಗಿಲ್ಲವು ಎಂ ಒಂದುಸಾರಿ ತುಟ್ಟತನ ಮಾಡುವವರೆಗೂ ಜನರ ಸ್ವಭಾ ವವು ಅವನಿಗೆ ತಿಲಿಯದೆ ಹೋಗಿದ್ದಲ್ಲಿ ಆ ಅಪರಾಧಕ್ಕೆ ಮಾಲೀಕನು ಜವಾಬ್ದಾರನಲ್ಲವೆಂಬ ತೀರ್ಮಾನವಿದೆಯು

## ಪ್ರಪಂಚದಲ್ಲೆಲ್ಲ ಅತ್ಯಂತ ದೊಡ್ಡದಾದ ದೂರದರ್ಶಕ ಯಂತ್ರ.

ತಾದು ವರೆಗೆ "ಮೌಂಟ್ ವಿಲ್ಸನ್" ಪ್ರಯೋಗಶಾಲೆ ಯಲ್ಲಿದ್ದ 100 ಅಂಗುಲದ ದೂರದರ್ಶಕ ಯಂತ್ರವೇ ಪ್ರಪಂಚದಲ್ಲೆಲ್ಲ ದೊಡ್ಡ ದೆನಿಸಿತ್ತು. ಈಗ ಕ್ಯಾಲಿಫೋ ರ್ನಿಯದ ಮೌಂಟ್ ಪೋಲೋಮಾರ್ ಗುಡ್ಡದ ಮೇಲೆ 200 ಅಂಗುಲದ ದೂರದರ್ಶಕ ಯಂತ್ರವನ್ನಿಡಲು ಹವ ಣಿಸುತ್ತಿದ್ದಾರೆ ಇದರ ಶಕ್ತಿಯೆಂದರೆ ಇದು ವರೆಗೆ ವೈಜ್ಞಾನಿಕರು ದೂರದರ್ಶಕ ಯಂತ್ರದಿಂದ ಎಷ್ಟು ದೂರ ನೋಡಬಲ್ಲವರಾಗಿದ್ದರೋ ಅದಕ್ಕಿಂತ ಎಂಟರಷ್ಟು ಹೆಚ್ಚು ದೂರ ಇದರ ಸಹಾಯದಿಂದ ನೋಡಬಹುದಾ ಗಿದೆ. ಚಂದ್ರನಿಗೂ ಭೂಮಿಗೂ ಇರುವ ಅಂತರ ಸುಮಾರು 25 ಲಕ್ಷ ವೈಲು ಈ ದೂರದರ್ಶಕಮಂತ್ರಕ್ಕೆ ಆ ದೂರವು ಭೂಮಿಯ ಮೇಲಿನ ಬರೇ 25 ವೈಲಿಗಳ ಸಮಾ ನವಾಗಿದೆ ಇದಕ್ಕೆ ಹಾರುವ ಯವುವು 17 ಆಡಿ ವ್ಯಾಸ ವುಳ್ಳದ್ದಾಗಿಯೂ 26 ಅಂಗುಲದ ದಪ್ಪವುಳ್ಳದ್ದಾಗಿಯೂ ಇವೆ ಯವದ ಹಿಂಭಾಗದಲ್ಲಿ 16 ಅಂಗುಲಗಳ ವರೆಗಿನ ಹಳ್ಳಗಳವೆ ಅದರ ಬಾರವು 16 ಟ್ (ಸುಮಾರು 1500 ಮಣ) ಇವೆ ಇದರ ನಿರ್ಮಾಣದಲ್ಲಿ ಮುಖ್ಯವಸ್ತು ಕಣ್ಣಿನ ರಕ್ತಿಮ 6,40,000 ಪೌಂಡ ಒಟ್ಟು ಯಂತ್ರವು 500 ಟ್ (16000 ಪಣ) ಭಾರವಿದೆ ಆವುಗಾ ಒಂದು ಮಗ ವ್ಯ ಕೂಡಿ ಇನ್ನೂ ತರ ಇಷ್ಟಾನುಸಾರ ತಿರುಗಿ ಸಬಹುದಾದಷ್ಟು ಸೂಕ್ಷ್ಮವಾಗಿ ನಿರ್ಮಿಸಿರುತ್ತಾರೆ

## ಸನಾತನಿಗಳ ಅಸಮಾಧಾನಪ್ರದರ್ಶನ

